Sri S. SIVAPPA (Sravanabelgola).—If the chair wants.. ......

Mr. SPEAKER.—"If I want"! Have I ever demanded it ?

Sri S. SIVAPPA.—I had brought it yesterday, Sir, and I have not brought it today. I will bring it tomorrow.

Mr. SPEAKER.—Then I will say that nothing has been placed before me that there has ever been a press conference. I am not going to give the ruling now, but tomorrow.

Sri G. V. GOWDA (Palya).—Should not the Hon'ble Chief Minister, against whom this charge is made, have an opportunity to say something in the matter ?

Mr. SPEAKER.—If I feel that there is any scope for the Hon'ble Chief Minister to be called upon, I will do it. If I feel that there is no scope, I won't do it. Sri G. Venkatai Gowda is an experienced parliamentarian and by this time he should have known....

Sri K. LAKKAPPA (Hebbur).–I have a request to make, Sir. In the agenda for tomorrow, debate on the Resources and Economy Committee report is put down. Most of the Members are likely to go to their places. So it would be better if it is not put down for tomorrow.

Mr. SPEAKER.—Evidently, the hon. member is in a hurry to go. Let the present business be over.

MYSORE SALES TAX (SECOND AMENDMENT) BILL, 1962.

Motion to Considered

Debate Continued.

Mr. SPEAKER.—I think only the Minister has to reply today.

Sri B. D. JATTI (Minister for Finance).—I want to reply, Sir, but it depends on the Chair.

Mr. SPEAKER.—I have no individual predelictions. It should depend on the members. Are there members who are desirous of participating ?

HON'BLE MEMBERS.—Yes, Sir.

(*A number of Hon'ble members stood*)

Mr. SPEAKER.—Sri Suryanarayana Rao may speak. He should please take ten minutes only.

Sri K. S. SURYANARAYANA RAO (Mysore City).—Sir, I would like to offer a few suggestions for the consideration of the Hon'ble Finance Minister and for the Select Committee while taking a decision on matters of importance contained in this Bill. At the outset, I would like to say that it is rather unfortunate that the series of Bills presented to this House have all been with effect from 1st April 1962. As I have repeated during the consideration of the previous Bill, except the Stamp Act, all have retrospective effect. I wish they had bestowed a little thought over it and made this applicable from the date it comes into force. What it means is this. We are proposing to tax new items under the Sales Tax Bill. Unless sales tax is collected, it is not possible to pay the amount. Supposing it is made retrospective and if it counts from the period it becomes applicable, there is every likelihood of a person who not liable to pay that tax now would become liable by the enforcement of the Act. This being an Act which has to cover a large number of items and a large number of persons, it is very necessary to avoid hardship being caused to any particular section of the people, and the date should be the date on which this Act comes into force.

There is another little error, to my mind, in the Statement of Objects and Reasons. It may or may not be too serious. Still it is an error to my mind. "The rate of tax on pulses and on gold and silver articles may be raised from one to two per cent."

Sri B. D. JATTI.—Perhaps the Hon'ble Member knows that the Statement of Objects and Reasons does not form part of the Bill.

Sri K. S. SURYANARAYANA RAO.–I know. It does not form part of the Bill. This is only to enable the members, to assist the members in the discussion or appreciate and offer suggestions. But a mistake seems to have crept into the statement of Objects and Reasons. This may kindly be looked

into. Had the Finance Minister bestowed a little more time, possibly, he would have given a better Bill than this. I say this for another reason: In proposing a tax on articles, what repurcussions it will have on the market and on the consumer is a thing that has not been looked into. Right from the Planning Commission down to this House and perhaps the Secretariat which runs the whole show-all are busily engaged in seeing how best to control prices, how best to bring down the cost of living and how best to make essential articles available to the consumers at, as reasonable a price as possible. Viewed in this light, does this Bill help us anywhere to go near that goal? On the other hand, by the provisions of this Bill we are likely to rise the cost of living and also the prices of articles. Instead of bringing down prices we will be directly or indirectly helping the market to rise and the inflationary tendency to develop. Therefore, this is a matter which should receive very serious consideration. The intention of this Bill is to get more money to finance the Third Plan. In order to implement the third plan successfully, it is very necessary to keep the price structure at a low level and to check the cost of living from rising. Otherwise with the increase in prices even though there may be a provision for Rs. 10,000 crores in the third plan, the physical targets would be reduced, to the extent of the inflation and to the extent of the rise in prices in proportion to the plan expenditure. And so instead of having a plan of Rs. 250 crores for the Mysore State we would be having a plan worth only Rs. 130 crores in terms of real physical value. Even if we take a very conservative estimate of the expanditure we will have to spend about 33⅓ per cent more and our net resource will be only about Rs. 130 crores for the third plan. Therefore, our efforts should be to see that by our taxes the inflationary tendency is not increased. If instead of taxing the essential commodities the Finance Minister had taken care to tax only luxury articles, the problem would not have been so serious. If we had taxed only the luxury articles we would also have been able to check the rise in the prices of essential food articles and at the same time raise the money required for the third plan. From the working of the present Sales Tax Act from the year 1957, our experience has shown that with better organisation and plugging the holes and preventing evasion, we can get much more than that we are getting today under the present Act. When the Bill was presented to the House in 1957 the then Finance Minister estimated the revenue from this measure at a little less than Rs. 5 crores. I do not have the statistics before me. I think the Finance Miniter will be able to give us correct figures. From a glance at the budget figures it appears that the yield from this tax has gone on increasing at the rate of Rs. 1 crore per year and it is now estimated at Rs. 8.74 lakhs for the current year. This is almost double the amount contemplated by the Finance Minister in 1957 when he piloted the Bill. By implementing the provisions properly it may be possible to get an yield of about Rs. 10 crores. According to the Finance Minister the yield as a result of the present Bill is likely to be only Rs. 1.40 crores, but I feel that it is likely to yield not less than 3 times that figure. To mention only one instance, the tax on food articles alone at one point is likely to yield Rs. 1.6 crores looking at the quantity of food articles arriving in the market. Then, take the case of fertilizers. Considering the turnover in fertilizers, the yield from that also is likely to be about Rs. 1 crore. So from these two items alone the yield will be about Rs. 2 crores. So I feel that instead of taxing all items touching everybody's pocket, if the tax is collected only on a few luxury items alone then instead of Rs. 3.5 crores as estimated by me according to the present Bill at least there would be a revenue of Rs. 150 lakhs, the amount required by the Finance Minister. If we want Rs. 1.50 crores more from this tax, then the tempo of this Bill can be reduced by 33⅓ per cent. In the first place I am not in favour of imposing any tax on food articles, but if

(SRI K. S. SURYANARYANA RAO)

that is inevitable then the rate of tax could be reduced by 33⅓ per cent. If the amount required by the Finance Minister is not forthcoming without levying this tax on food articles, then alone we should consider taxing food articles and not till then. As I have already said, to get the money required for the purpose of financing the Third Plan, there are three ways; the first is to implement the present Act rigorously, plugging all the holes. The second step is to effect as much economy as possible in the administration and the third is to raise the extra money required from the market as public loan. Of course, the question of payment of interest may arise. But that is not as much as financing the plan all by ourselves by taxing the present generation. It is always better to borrow and repay over a long period of years. Mostly we are getting our loans from the Government of India and it should be possible for the State Government to persuade the Government of India to extend the period of repayment of these loans.

Sri J. H. SHAMSUDDIN (Deputy Minister for Electricity).—It is very difficult.

Sri K. S. SURYANARAYANA RAO.—The Government of India will have to be told that they have got to extend the period of repayment. We learn that only yesterday the Planning Commission constituted two committees to go into the question of holding the price line. We will have to tell them that if we have to do all this by taxing the people more and more on essential articles, etc, then we may not be able to push through the whole plan and so if the Government of India is anxious that the whole plan should be put through, then they must give us some assistance as it would not by possible for us to tax the people any more.

Sri J. H. SHAMSUDDIN.—If the repayment of the loans taken by States from the Government is deferred, then the Government would not be able to repay the loans taken by them from foreign countries and the World Bank according to schedule and those payments also would have to be deferred and that is difficult.

Sri K.S. SURYANARAYANA RAO.—The Government of India can manage themselves and can even come to our assistance. Yesterday, it was mentioned on the floor of the House that a grant was given to the Nagarjunasagar Project to the tune of Rs. 12 crores. Here, we are asking for a loan.

The whole of section 6 is sought to be deleted. If we delete this sectian, it means we are deleting sub-section 5 of section 6 which proposed to tax the chasis of motor vehicles, *etc.*, and bringing them under the general sales tax clause where a turnover tax of 2 per cent is levied. By proposing a multi-point tax it comes to this. There are other provisions which control the agent. The Agent works for the principal and whatever he collects for the principal, he will collect the tax thereon also and pay it. Instead of taxing motor vehicles at 5 per cent, we would virtually give up 3 per cent and collect only 2 per cent. The motor vehicle dealer is one who sells for his principal and the principal pays only once. Therefore, I would suggest to the Finance Minister to look into this matter. If we put another 5 per cent, we may get the required amount instead of putting taxes on essential articles like cereals, charcoal, *etc.* Then again, we propose to use these funds for the purpose of low-income group housing, rural housing for Scheduled Castes and Scheduled Tribes and for these we use cement and wood. If we tax these very articles which we make use of for building low income-group houses at a particular cost, is it possible to build houses at that cost ? Such of the articles as are absolutely necessary to implement the Five-Year Plan should be taxed at a very much less rate than other articles. So far as timber is concerned, if they charge at one point at the very source, we will get more. They may say that it is mainly sold to the Government of India and the Railways. Let them pay for it. Our income from this source is Rs. 8 to 10 crores and if

we tax another 2 per cent, we will get 16 lakhs more on this one item. These are the items which the Finance Minister will kindly bear in mind when the Bill is examined at the Select Committee. In the First Schedule the Finance Minister has chosen certain items which need not be taxed or in respect of which they may give a little reduction or at least they may retain them as they are. For example, why should we not raise the tax on playing cards? Similarly, why should we not put more tax on precious and toilet articles? Firewood will have to be given some concession. We can as well tax more fire arms including guns, rifles, *etc.* which are included in Schedule II. Marble and articles made of marble (Item 13) may be taxed more. Bicycles and their accessories should not be taxed because it is a poor man's conveyance. Dictaphones and other similar apparatus and foamed rubber sheets will have to be taxed. Similarly, typewriters and lifts should be taxed more. Another article which they have chosen is electrical goods. This is the time when we are giving power to every village and home under the Five-Year Plan and we are taxing these electrical goods. Why should we tax bulbs and switches which are used by the common man in his home? Instead why not we tax heavy transformers and heavy machines? On transformers the State Electricity Board is charged sales tax. We may charge them something more. On aeroplanes we may as well charge 25 per cent instead of 6 per sent. Each rail coach costs about Rs. 5 Lakhs. Tax them more. These are the items which the Finance Minister will have to bear in mind.

2-30 P. M.

Mr. SPEAKER.—Are aeroplanes sold here?

Sri K. S. SURYANARAYANA RAO.—The Hindustan Aircraft Factory sell their aeroplanes either to the Defence Department or to the A. I. I. or IAC whatever it is. They are sold in Bangalore. Each plane cots Rs. 10 to 15 lakhs and even one per cent will give us Rs. 15,000 on cach plane. Another item I would like the Finance Minister to bear in mind is item 35, Vanaspathi. Vanaspathi should be taxed a little more. This would give incentive to hand ghani which is a village indigenous supply. We will be thereby encouraging village craft and village industry. When we get Vanaspathi in fine packing and in good condition, nobody would be enamoured to go into the indigenous article, because the other looks bright though it may not contain the best quality. Sir, all liquors including the beer may be considered; even item 38 it could go in; item 39 is about country liquor other than toddy; item No. 48 is about chemical fertilizers, bonemeal etc., they have charged one per cent. It may be retained at one per cent because it is made use of in grow more food and package plans. When we say on one hand 'grow more and earn more' and on the other hand we tax them for their necessity and say "well you have grown well, you have earned well and you pay well", What is the difference left between the earning and the expenditure he has incurred? Therefore, I would very much request the Hon'ble Finance Minister to look into these matters while going into the Select Committee. The other thing that was mentioned was about aerated water; we may tax the air itself; if we tax gas, possibley the person manufacturing aerated water alone will use it; commercial gas will give a little more than aerated water. Gas cylinders are sold for a particular price and they may be taxed. By screening all these articles and keeping in mind to avoid taxing on food can be avoided and if the taxes that I have proposed are taken and worked out, it will give them if not more, at least as much as they want and therefore, I suggest that food and other articles may be exempted from taxes.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಪತಿಗಳೇ, ಈಗಾಗಲೇ ಮೂರು ಮಸೂದೆಗಳು ಅಂಗೀಕಾರವಾಗಿ ಜನರ ಮೇಲೆ ಎರಡು ಕೋಟಿ ರೂಪಾಯಿ ತೆರಿಗೆಯನ್ನು ಹೇರಿದ್ದಾರೆ. ಇನ್ನು ನಾಲ್ಕು ಮಸೂದೆಗಳು ಅಂಗೀಕಾರವಾಗಿ ಇನ್ನೂ ಹೆಚ್ಚಿನ ತೆರಿಗೆಗಳ ಹೊರೆಯನ್ನು ಹೇರುವ ನಿರೀಕ್ಷೆ ನಮ್ಮ

(ಶ್ರೀ ಎಚ್. ಡಿ. ದೇವೇಗೌಡ)

ಮುಂದಿದೆ. ಸಭೆಯ ಮುಂದಿರುವ ಮಾರಾಟ ತೆರಿಗೆಯ ಎರಡನೆಯ ತಿದ್ದುಪಡಿ ಮಸೂದೆಯ ಮೇಲೆ ನೆನ್ನೆಯ ದಿವಸ ನಡೆದ ಚರ್ಚೆಯಲ್ಲಿ ಭಾಗವಹಿಸುತ್ತ, ಈ ಮಸೂದೆಯಲ್ಲಿರುವ ಅನೇಕ ಲೋಪದೋಷಗಳನ್ನು ಅನೇಕ ಸದಸ್ಯರು ಸಭೆಯ ಗಮನಕ್ಕೆ ತಂದಿದ್ದಾರೆ. ಈ ಮಾರಾಟ ತೆರಿಗೆ ಮಸೂದೆಯನ್ನು ಪಾಸು ಮಾಡಿದರೆ ಜನರಿಗೆ ಆಗತಕ್ಕ ನೋವೇನಿದೆಯೆಂಬ ಬಗ್ಗೆ ಹೆಚ್ಚು ನಿಷ್ಣಾತರಾಗಿರುವ ಶ್ರೀ ಮಾರ್ ಕೆ. ಪಿ. ಗದಗ್‌ಅವರೂ ಇತರ ಅನೇಕ ಸದಸ್ಯರೂ ತಮ್ಮ ಅಭಿಪ್ರಾಯಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಈ ತೆರಿಗೆಗಳ ಮಸೂದೆಗಳನ್ನು ನಮ್ಮ ಮುಂದೆ ಮಂಡಿಸತಕ್ಕ ಕಾಲದಲ್ಲಿ ಸರ್ಕಾರದಿಂದ ಬರುವ ವಾದ ಒಂದೇ. ಅದೇನೆಂದರೆ, ನಮಗೆ 43 ಕೋಟಿ ರೂಪಾಯಿ ಬೇಕಾಗಿದೆ, ಮೂರನೆಯ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡಲು ನಮ್ಮಲ್ಲಿ ಹಣವಿಲ್ಲವಾದುದರಿಂದ ತೆರಿಗೆಗಳನ್ನು ಹೆಚ್ಚಿಸುವುದು ಅನಿವಾರ್ಯವಾಗಿದೆಯೆಂದು ಹೇಳುತ್ತಾರೆ. ಶ್ರೀಮಾರ್ ಎ. ಜಿ. ರಾಮಚಂದ್ರರಾಯರ Resources and Economy ಸಮಿತಿಯ ವರದಿಯ ಆಧಾರದ ಮೇಲೆ ಈ ತೆರಿಗೆಗಳ ಮಸೂದೆಗಳನ್ನು ನಮ್ಮ ಮುಂದೆ ಮಂಡಿಸಿದ್ದಾರೆ. ನಾನಾದರು ಇಷ್ಟು ಹೇಳಬಯಸುತ್ತೇನೆ: ಈ ಸಮಿತಿಯ ವರದಿಯಲ್ಲಿರತಕ್ಕ ಅಂಶಗಳನ್ನು ಸೂಕ್ಷ್ಮವಾಗಿ ನೋಡಿದರೆ, ಅನೇಕ ಇಲಾಖೆಗಳಲ್ಲಿರುವ leakage ಸರಿಪಡಿಸಿದರೆ, ಈ ತೆರೆಗೆಗಳನ್ನು ಹಾಕುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಈಗ ಬೇಕಾದಷ್ಟು ಲೀಕೇಜ್ ಇದೆ, ಮಾರಾಟ ತೆರಿಗೆ ಕೊಡದೆ ತಪ್ಪಿಸಿಕೊಳ್ಳುವವರನ್ನು ಹಿಡಿದು, ಸರಿಯಾಗಿ ವಸೂಲು ಮಾಡಿದರೆ ಇನ್ನೂ ಮೂರು ಕೋಟಿ ರೂಪಾಯಿ ಸರ್ಕಾರಕ್ಕೆ ಬರುತ್ತದೆ. ಅಲ್ಲದೆ ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯಲ್ಲಿ ಆಗುತ್ತಿರುವ ಲೀಕೇಜ್ ತಡೆಗಟ್ಟಿ ಸರಿಯಾಗಿ ವಸೂಲು ಮಾಡಿದರೆ ಸುಮಾರು ಮೂರು ಕೋಟಿ ರೂಪಾಯಿ ಬರುತ್ತದೆಂದು ಹೇಳಿದ್ದಾರೆ. ಇದನ್ನೆಲ್ಲಾ ಬಿಟ್ಟು ತರಾತುರಿಯಿಂದ 43 ಕೋಟಿ ರೂಪಾಯಿ ವಸೂಲು ಮಾಡಬೇಕೆಂಬವಾದವನ್ನು ಮುಂದಿಟ್ಟು 43 ಕೋಟಿ ರೂಪಾಯಿ ನಷ್ಟು ತೆರಿಗೆಗಳನ್ನು ಹೊರಿಸಲು ಹೊರಟಿರುವ ಸರ್ಕಾರದ ಮನೋಭಾವವನ್ನು ನೋಡಿದರೆ, ಇದರಿಂದಾಗತಕ್ಕ ಪರಿಣಾಮದ ಬಗ್ಗೆ ಅವರಿಗೆ ಎಳ್ಳಷ್ಟೂ ಅರಿವಿಲ್ಲವೆಂಬುದು ವ್ಯಕ್ತವಾಗುತ್ತದೆ. ಕೆಲವು ಮಂತ್ರಿಗಳು ಎರಡು ಮೂರು ಮಸೂದೆಗಳ ಮೇಲೆ ಮಾತನಾಡುವ ಕಾಲದಲ್ಲಿ ವಿಧಾನಸೌಧ ಕಟ್ಟಿದ್ದೇವೆ, ಲೆಜಿಸ್ಲೇಟರ್ಸ್ ಹೋಮ್ ಕಟ್ಟಿದ್ದೇವೆ, ರಸ್ತೆಗಳಿಗೆ ತಾರು ಹಾಕಿದ್ದೇವೆ ಮುಂತಾಗಿ ಹೇಳಿದರು. ಇದನ್ನು ನೋಡಿದರೆ, ಈ ಕೆಲಸಗಳನ್ನು ಮಾಡಲು ಕಾಂಗ್ರೆಸ್ಸನ್ನು ಬಿಟ್ಟರೆ ಇನ್ನು ಯಾರೂ ಇಲ್ಲವೆಂದು ತಿಳಿದು ಕೊಂಡಿರುವ ಹಾಗೆ ಕಾಣುತ್ತದೆ. ಯೋಜನೆಗಳಲ್ಲಿರುವ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಮಾಡುವ ಬಗ್ಗೆ ಕಾಂಗ್ರೆಸ್‌ನವರಿಗಿರುವ ಆಸಕ್ತಿಗಿಂತಲೂ ಹೆಚ್ಚಿನ ಆಸಕ್ತಿ ಇತರರಲ್ಲಿದೆ. ಕಾಂಗ್ರೆಸ್‌ನವರು ಮಾಡುವುದರಲ್ಲಿರುವ ಲೋಪ ದೋಷಗಳನ್ನು ನಾವು ಹೇಳಿದರೆ, ಅವು ಸಣ್ಣ ವಿಷಯಗಳೆಂದು ಹೇಳುತ್ತಾರೆ. ಅವರ ಜೇಬಿನಿಂದ ಹಣವನ್ನು ಹೀಗೆ ಖರ್ಚುಮಾಡಿದ್ದಿದ್ದರೆ ಅವರಿಗೆ ಗೊತ್ತಾಗುತ್ತಿತ್ತು, ಆದರೆ ಜನರ ಹಣವನ್ನು ಖರ್ಚು ಮಾಡುವುದರಲ್ಲಿ ಅವರಿಗೆ ಗೊತ್ತಾಗುವುದಿಲ್ಲ. ಉದಾಹರಣೆಗೆ, ವಿಧಾನಸೌಧದ ಕಟ್ಟಡದ ಬಾಗಿಲಿನಲ್ಲಿ ಬರೆಸಿದ್ದ "ಸರ್ಕಾರದ ಕೆಲಸ ದೇವರ ಕೆಲಸ" ಎನ್ನುವುದನ್ನು ಅಳಿಸುದಕ್ಕೆ ಎಂಟು ಸಾವಿರ ರೂಪಾಯಿ ಖರ್ಚುಮಾಡಿದರು. ಇದರಿಂದ ಇವರಿಗೆ ನಾಚಿಕೆಯಾಗುವುದಿಲ್ಲವೆ? ರೈತನ ಹೊಟ್ಟೆಯ ಮೇಲೆ ಹೊಡೆದು ಈ ರೀತಿ ಮಾಡಬಾರದು, ತಮ್ಮ ಸ್ವಂತ ಹಣವನ್ನು ಎಷ್ಟು ಎಚ್ಚರಿಕೆಯಿಂದ ಖರ್ಚುಮಾಡುತ್ತಾರೋ ಹಾಗೆ ಇಲ್ಲಿಯೂ ಮಾಡಬೇಕೆಂದು ಯೋಚನೆ ಮಾಡುವುದು ಇವರ ಕರ್ತವ್ಯ, ಇದನ್ನು ಬಿಟ್ಟು ತಮ್ಮ ಮನಸ್ಸಿಗೆ ಬಂದ ಹಾಗೆ ಮಾಡಿದರೆ ಅದರ ಪರಿಣಾಮ ಶ್ರೀಮಾರ್ ಶಿವಪ್ಪನವರು ಹೇಳಿದ ಹಾಗೆ ದೇಶದಲ್ಲಿ ಕ್ರಾಂತಿಯಾಗತಕ್ಕ ಕಾಲ ಬರಬಹುದು. ಇದನ್ನೆಲ್ಲಾ ಆಲೋಚನೆ ಮಾಡಬೇಕು. ವಿರೋಧ ಪಕ್ಷದವರು ಹೇಳುವ ಒಳ್ಳೆಯ ಸಲಹೆಗಳನ್ನು ಕಾರ್ಯಗತ ಮಾಡುವ ಕಡೆಗೆ ಇವರು ತಮ್ಮ ಮನಸ್ಸನ್ನು ಹರಿಸುವುದಿಲ್ಲ.

ನಾನು ಹೊಸದಾಗಿ ಈ ವಿಧಾನಸಭೆಗೆ ಚುನಾಯಿತನಾಗಿ ಬಂದು ಈ ಮೂರು ತಿಂಗಳಿನಿಂದ ನೋಡುತ್ತಿದ್ದೇನೆ; ಸರ್ಕಾರದವರು ವಿರೋಧ ಪಕ್ಷದ ಸಲಹೆಗಳನ್ನು ತೃಣದಂತೆ ನೋಡುತ್ತಿದ್ದಾರೆ. ನಾನಂತೂ ಸ್ವತಃ ಅನುಭವದಿಂದ ಇದನ್ನು ಹೇಳುತ್ತಿರುವುದು. ಇದರಿಂದ ನಮಗೇನೂ ಅಂಥ ವ್ಯಥೆಯಿಲ್ಲ. ಆದರೆ ದೇಶದ ಜನತೆಗೆ ಆಗತಕ್ಕ ದುಷ್ಪರಿಣಾಮವೇನೆಂಬದನ್ನು ನೋಡಿ. ನೀವು ಎಷ್ಟೇ ತಾತ್ಸಾರ ಮನೋಭಾವ ತೋರಿಸಿದರೂ ನಾವು ಸಲಹೆಗಳನ್ನು ಹೇಳುವುದಕ್ಕೆ ಪ್ರಯತ್ನಪಟ್ಟಿದ್ದೇವೆ. ಅದರ ವಿಷಯದಲ್ಲಿ ಹೆಚ್ಚಿನ ಗಮನಕೊಡಬೇಕೆಂದು ಒತ್ತಾಯ ಮಾಡುತ್ತೇವೆ.

ಇದರ ಜೊತೆಗೆ, ಮೊನ್ನೆ ತಾನೆ ಶ್ರೀಮಾರ್ ಅಣ್ಣಾರಾವ್ ಗಣಮುಖಿಯವರು 'ರೈತನೆಂಬುವನು ಭೂಲೋಕದ ಕಾಮಧೇನು' ಎಂದು ಹೇಳಿದರು, ನಿಜ. ನೀವು ಎಷ್ಟೇ ತೆರಿಗೆ ಹೊರಸಿದರೂ, ಅವರಲ್ಲಿತಕ್ಕ ಮೌಢ್ಯ ಮತ್ತು ಅನಕ್ಷರತೆಯಿಂದಾಗಿ, ತೆರಿಗೆಗಳ ವಿಷಯವನ್ನು ತಿಳಿಯದೆಯೇ ಈ ಜವಾಬ್ದಾರಿಯನ್ನು ಹೊರುತ್ತಾರೆ-ಅವನ ಈ ಗುಣವನ್ನು ದುರುಪಯೋಗಪಡಿಸಿಕೊಳ್ಳುವುದು ಇವರಿಗೆ ತರವಲ್ಲ. ಗೋವಿನ ಹಾಲು ಕರೆದು ನಾಯಿಯ ಬಾಯಿಗೆ ಹಾಕುವ ಹಾಗೆ ಇವರು ಮಾಡುತ್ತಿದ್ದಾರೆ. ಶರಾವತಿ ಪ್ರಾಜೆಕ್ಟಿನ ವಿಷಯದಲ್ಲಿ 60 ಲಕ್ಷ ರೂಪಾಯಿಗಳನ್ನು ಕಂಟ್ರಾಕ್ಟರಿಗೆ ಕೊಟ್ಟರಲ್ಲಾ ಇದು ಯಾವ ನೀತಿಯಮೇಲೆ! ಯಾವುದೋ ಆರ್ಬಿಟ್ರೇಟರ್ ರಿಪೋರ್ಟ್ ಬಂದಿತಂತೆ. ಆ ಆರ್ಬಿಟ್ರೇಟರನ್ನು ನೇಮಕ ಮಾಡಿದ ರೀತಿಯೇನು! ಸರ್ಕಾರದವರು ಒಬ್ಬರನ್ನು Appoint ಮಾಡುವುದಂತೆ, ಇನ್ನೊಬ್ಬರನ್ನು ಸರ್ಕಾರದವರೇ ಕಂಟ್ರಾಕ್ಟರ ಸೂಚನೆಯಂತೆ ಮಾಡುತ್ತಾರಂತೆ. ಒಬ್ಬ ಡಿಫೆಕ್ಟೀವ್ ಟೆಂಡರು ಕೊಟ್ಟನೆಂದು ಕರೆಸಿ ನೆಗೋಷಿಯೇಟ್ ಮಾಡಿ ಅವನಿಗೇ ಕೆಲಸ ವಹಿಸುವುದಂತೆ! ಆಮೇಲೆ ಕೆಲಸ ಸಕಾಲದಲ್ಲಿ ಆಗಲಿಲ್ಲವೆಂದು ತಿಳಿದಮೇಲೆ ಅವನಿಗೇ ಕಾಂಪೆನ್ಸೇಷನ್ ಕೊಡುವುದಂತೆ! ಅದೂ ಲಕ್ಷಾಂತರ ರೂಪಾಯಿಗಳನ್ನು! ಮನಸ್ಸಿಗೆ ಬಂದ ಹಾಗೆ ಹೀಗೆ ಖರ್ಚು ಮಾಡುವುದಕ್ಕೆ ಕೊನೆ ಮೊದಲಿದೆಯೇ? ಸಭೆಯಲ್ಲಿ ಅದರ ವಿಚಾರ ಪ್ರಶ್ನೆ ಕೇಳಿದರೆ ಸರಿಯಾದ ಉತ್ತರ ತೆಗೆದುಕೊಳ್ಳುವುದೇ ಮಹತ್ತರ ಕಷ್ಟವಾಗುತ್ತದೆ! ಕೇಳಿದರೆ ಸರಿಯಾದ ಉತ್ತರವೇ ಇಲ್ಲ. ಮನಸ್ಸಿಗೆ ಬಂದಂಥ ಉತ್ತರ! ಈ ರೀತಿಯೆಲ್ಲಾ ಮಾಡುತ್ತಾ ನಮ್ಮನ್ನು ತಪ್ಪುದಾರಿಗೆ ಎಳೆದುಕೊಂಡು ಹೋಗುವುದಕ್ಕಾಗಿ ನಾನು ವಿಷಾದಿಸುತ್ತೇನೆ. ಇದನ್ನು ಇಷ್ಟು ನೊಂದುಕೊಂಡು ನಾನೇಕೆ

ಹೇಳುತ್ತಿದ್ದೇನೆಂದರೆ, ಈ ರೀತಿಯ ಆಡಳಿತ ನಡೆಸುವು ದರಿಂದ ಯಾರಿಗೂ ಒಳ್ಳೆಯದಾಗುವುದಿಲ್ಲ.

ಜನತೆಯಿಂದ 42 ಕೋಟಿ ರೂಪಾಯಿಗಳನ್ನು ಹೀಗೆ ವಸೂಲು ಮಾಡಿಕೊಂಡು ಮೂರನೆಯ ಪಾಂಚ ವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡುತ್ತಿದ್ದೇವೆಂದು ಏನು ಹೇಳುತಿದ್ದೀರೋ ಅದು ಖಂಡಿತ ಸಾಧನೆಯಾಗುವುದಿಲ್ಲ. ಈ ರೀತಿ ಪ್ಲಾನಿನಲ್ಲಿರತಕ್ಕ ಕೆಲಸಗಳಮೇಲೆ ತಮ್ಮ ಇಷ್ಟದಂತೆ ಹಣ ಖರ್ಚು ಮಾಡುವುದು, ಅಂದಾಜುಗಳನ್ನು ರಿವೈಸ್ ಮಾಡುವುದು-ಇವೆಲ್ಲದರ ಪರಿಣಾಮವಾಗಿ, 250 ಕೋಟಿ ರೂಪಾಯಿಗಳಲ್ಲಿ ಕೆಲಸ ಮಾಡಬೇಕೆಂದು ಮಾಡಿಕೊಂಡಿರುವ ಪ್ರಾಜೆಕ್ಟುಗಳನ್ನು ಖಂಡಿತ ನೆರವೇರಿಸುವುದಕ್ಕಾಗುವುದಿಲ್ಲ. ಈಗ ನೀವು ಮಾಡುತ್ತಿರುವ ಪ್ರತಿಯೊಂದು ಕೆಲಸವೂ ಎರಡು ಕೋಟಿ ರೂಪಾಯಿನದು ನಾಲ್ಕು ಕೋಟಿ ರೂಪಾಯಿಯದಾಗುತ್ತಿದೆ. ಇತಿ ಮಿತಿಯಿಲ್ಲದ ಅಂತರದಲ್ಲಿ ಖರ್ಚುಗಳು ಹೆಚ್ಚುತ್ತಿರುವ ಕಾಲದಲ್ಲ, ನಿಮ್ಮ ಮೂರನೆಯ ಯೋಜನೆಯ ಕಾರ್ಯಗಳನ್ನು ನೀವು ಹಾಕಿಕೊಂಡಿರುವ ಪಮಿರಿತಿಯಲ್ಲಿ ಮುಗಿಸುವುದಕ್ಕೆ ಸಾಧ್ಯವೇ ! ಈ ಅಂಶವನ್ನು ಸರ್ಕಾರದವರು ತೀವ್ರವಾಗಿ ಗಮನಿಸಬೇಕಾಗುತ್ತದೆ. ಇಲ್ಲದಿದ್ದರೆ, ಈ ರೀತಿ ತಿನ್ನುವ ಅನ್ನದಮೇಲೆ, ಮನುಷ್ಯನ ದಿನನಿತ್ಯದ ಪದಾರ್ಥಗಳ ಮೇಲೆಲ್ಲಾ ತೆರಿಗೆ ಹೇರಿ, ಅದರಿಂದ ತಂದ ಹಣದಿಂದ ಏನೊಂದು ಲಾಭವನ್ನೂ ಪಡೆದಂತಾಗುವುದಿಲ್ಲ. ಈಗಂತೂ ನೀವು ಪಡೆಯುತ್ತಿರುವ ಹಣ ಸರಿಯಾದ ರೀತಿಯಲ್ಲಿ ವಿನಿಯೋಗವಾಗುತ್ತಿಲ್ಲ. ಒಳ್ಳೆಯ ರೀತಿಯಲ್ಲಿ ಖರ್ಚಾಗುತ್ತಿಲ್ಲವಲ್ಲಾ ಎಂದು ನಾನು ಬಹಳ ವಿಷಾದ ಪಡುತ್ತೇನೆ.

ಈ ದೃಷ್ಟಿಯಿಂದ ಈ ತಿದ್ದುಪಡಿ ಮಸೂದೆಯಲ್ಲಿ ಸೇರಿಸತಕ್ಕ ಕೆಲವು ಐಟಂಗಳನ್ನು ನಾನು ತೀವ್ರವಾಗಿ ವಿರೋಧಿಸಬೇಕಾಗಿದೆ. ರಾಗಿ, ಅಕ್ಕಿ, ಜೋಳ ಇಂಥವುಗಳಮೇಲೆ ಹಾಕಿರುವ ತೆರಿಗೆಯನ್ನು ನೀವು ಖಂಡಿತ ಕೈಬಿಡಬೇಕು, ಇದು ಬಹಳ ಅನ್ಯಾಯ. ಸಾಮಾನ್ಯ ವ್ಯವಸಾಯದಿಂದ ಜೀವಿಸುವ ಜನ ಇದರಿಂದಾಗಿ ಬಹಳ ಕಷ್ಟಕ್ಕೀಡಾಗುತ್ತಾರೆ. ಹಳ್ಳಿಗಾಡಿನಲ್ಲಿ ಸುಮಾರು 80 ಪಾಲು ಜನ ಕೇವಲ 3-4 ಎಕರೆಯಿಟ್ಟುಕೊಂಡು 2-3 ತಿಂಗಳಿಗೆ ಆಗ ವಷ್ಟು ಆಹಾರ ಬೆಳೆದುಕೊಳ್ಳುತ್ತಿದ್ದಾರೆ. ಮಿಕ್ಕ 9 ತಿಂಗಳು ಅತನೂ ಕೊಂಡು ತಿನ್ನಬೇಕಾಗಿರುತ್ತದೆ. ಅಂಥವರಿಗೂ ಈಗ ಈ ರೀತಿ ಟ್ಯಾಕ್ಸ್ ಹಾಕುವುದು ಬಹಳ ಕಷ್ಟ. ಆದ್ದರಿಂದ Single Point ಆಗಿಯಾಗಲೀ, ಮಲ್ಟಿ ಪಾಯಿಂಟ್ ಆಗಿಯಾಗಲೀ, ಯಾವುದೇ ರೀತಿಯಲ್ಲಿ ಅವುಗಳಮೇಲೆ ತೆರಿಗೆ ಹಾಕುವುದು ಸೂಕ್ತವಲ್ಲವೆಂದು ಹೇಳುತ್ತೇನೆ.

ಎಲ್ಲಕ್ಕಿಂತ ಮೇಲಾಗಿ, ಸೌದೆಯಮೇಲೆ ತೆರಿಗೆ ಹಾಕಿರುವಂಥಾದ್ದನ್ನು ನಾನು ಎಲ್ಲಿಯೂ ನೋಡಿಲ್ಲ. ತೀರ ಸಣ್ಣ ಕೆಲಸ ಇದು-ಯಾರು ಇದನ್ನು Suggest ಮಾಡಿದರೋ ಗೊತ್ತಿಲ್ಲ. ಇದು ಪ್ರತಿಯೊಬ್ಬ ಮನುಷ್ಯನಿಗೂ ಅವಶ್ಯಕವಾಗಿರುವಂಥಹುದು. ಈ ರೀತಿಯೆಲ್ಲಾ ಹೋಗಿ ತೆರಿಗೆ ವಸೂಲು ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬಾರದು. ಹೇಗೂ ಇದರಲ್ಲಿರತಕ್ಕ ಇಂಥ ಲೋಪದೋಷಗಳನ್ನೆಲ್ಲಾ ಸೆಲೆಕ್ಟ್ ಕಮಿಟಿಯವರು ಕೂಲಂಕಷವಾಗಿ ಪರಿಶೀಲನೆ ಮಾಡಿ ಈ ಮಾನ್ಯ ಸಭೆಗೆ ಒಪ್ಪಿಸುವ ಸಂದರ್ಭವಿರುವುದರಿಂದ ನಾನೀಗ ಇನ್ನೇನೂ ಹೆಚ್ಚಿಗೆ ಹೇಳಬಯಸುವುದಿಲ್ಲ. ಸೆಲೆಕ್ಟ್ ಕಮಿಟಿಯವರು ಇದರಲ್ಲಿರತಕ್ಕ ಎಲ್ಲ ವಿಷಯಗಳನ್ನೂ ಸರಿಯಾದ ರೀತಿಯಲ್ಲಿ ವಿಮರ್ಶಿಸಿ ಇದನ್ನು ಕೈಬಿಡುವುದಕ್ಕೆ ಪ್ರಯತ್ನಿಸುವುದೇ ಉತ್ತಮ. ಒಂದು ವೇಳೆ ಅದೂ ಸಾಧ್ಯವಿಲ್ಲವೆಂದರೆ, ಅದು ಅನಿವಾರ್ಯವೆಂದೆಣಿಸಿದರೆ ಇಲ್ಲಿರತಕ್ಕ ಲೋಪದೋಷಗಳನ್ನಾದರೂ ಸರಿಪಡಿಸಿ ಸಾಮಾನ್ಯ ಮನುಷ್ಯರಿಗಾಗುವ ಕಷ್ಟವನ್ನು ತಪ್ಪಿಸುವಂತೆ ತಿದ್ದುಪಡಿ ಮಾಡಿ ನಮ್ಮ ಮುಂದೆ ತರಬೇಕೆಂದು ಹೇಳುತ್ತೇನೆ.

†ಶ್ರೀ ಎ. ಪಿ. ಅಪ್ಪಣ್ಣ (ವೀರಾಜಪೇಟೆ).—ಮಾನ್ಯ ಸಭಾಪತಿಗಳೇ, ಈ ಮಾರಾಟ ತೆರಿಗೆಯ ತಿದ್ದುಪಡಿಯ ವಿಚಾರವಾಗಿ ನಾನು ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಈ ಕಂದಾಯವನ್ನು ಹಾಕುವುದಕ್ಕೆ ಕಾರಣಗಳನ್ನು ನಮ್ಮ ಮುಂದಿಡುತ್ತಾ ಸರ್ಕಾರದವರು ಎ. ಜಿ. ರಾಮಚಂದ್ರ ರಾಯರ ರಿಸೋರ್ಸಸ್ ಮತ್ತು ಎಕಾನಮಿ ಕಮಿಟಿಯ ರಿಪೋರ್ಟಿನ ಕೆಲವು ವಿಷಯಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಆ ವರದಿಯಲ್ಲಿ ಬೇರೆ ಕೆಲವು ಸಲಹೆಗಳನ್ನು ಕೊಟ್ಟಿದ್ದರೂ ಸಹ ಸರ್ಕಾರ ಅದನ್ನು ತಮ್ಮದೇ ಆದ ಕೆಲವು ಕಾರಣಗಳಿಂದ ಕೈಬಿಟ್ಟಿದ್ದಾರೆ. ಉದಾಹರಣೆಗೆ ಎ. ಜಿ. ಆರ್. ಕಮಿಟಿಯಲ್ಲಿ ಹೋಟಲುಗಳ ಟರ್ನೋವರ್ ಮೇಲೆ ಇರತಕ್ಕ ಟ್ಯಾಕ್ಸನ್ನು ಶೇಕಡ 2 ರಿಂದ ಶೇಕಡ 3ರ ವರೆಗೆ ಏರಿಸಬೇಕೆಂದು ಹೇಳಿದ್ದಾರೆ. ಈಗ ತಂದಿರತಕ್ಕ ಮಸೂದೆಯ ಸಂಬಂಧದಲ್ಲಿ ಅವರು ಇದನ್ನು ಬಿಟ್ಟಿರುವುದಕ್ಕೆ ಏನು ಕಾರಣ ಕೊಟ್ಟಿದ್ದಾರೆಂದರೆ.

> "Similarly the rate of tax on Total turnover has not been enhanced to three per cent as recommended by the Committee, since it will increase the tax burden on persons who have to take food and other eatables in Hotels."

ಇದು ಸರಿಯೇ,? ಏಕೆಂದರೆ ಆಹಾರ ಪದಾರ್ಥಗಳನ್ನು ಅಲ್ಲಿ ತಿನ್ನುವವರಿಗೆ ತೊಂದರೆಯಾಗುತ್ತದೆಂದು ಹೇಳಿದರೆ, ಇದೇ ತತ್ವವನ್ನು ಇತರ ವಿಚಾರದಲ್ಲೂ ಏಕೆ ಅನ್ವಯಿಸಬಾರದು ಎಂಬದನ್ನು ನೀವು ಗಮನಿಸಬೇಕು.

ಆಹಾರ ಪದಾರ್ಥಗಳ ಬೆಲೆ ಏರಿದಾಗ ಹೋಟಲಿನಲ್ಲಿ ಊಟ ಮಾಡುವವರ ಮೇಲೆ ಈ ಕರ ಬೀಳುತ್ತದೆ, ನಿಜ. ಇಂಥ ಕರವನ್ನು ಹಾಕಬಾರದೆಂಬ ತತ್ವವನ್ನು ಸರ್ಕಾರ ಅಂಗೀಕರಿಸದ ಮೇಲೆ ಸರ್ಕಾರ ಈ ತತ್ವವನ್ನು ಸಾರ್ವತ್ರಿಕವಾಗಿ ಅನುಸರಿಸಬೇಕು. ಇಲ್ಲವಾದರೆ ಆಹಾರ ಸಾಮಗ್ರಿಗಳನ್ನು ಕೊಳ್ಳುವವರಿಗೆ ತೊಂದರೆ ಆಗುತ್ತದೆ ಎಂಬುದನ್ನು ನಾವು ಗಮನದಲ್ಲಿಡಬೇಕಾಗುತ್ತದೆ. ಕೆಲವು ಆಹಾರ ಸಾಮಾಗ್ರಿಗಳಿಗೆ ಕಂದಾಯವನ್ನು ಹಾಕುವ ಸಂದರ್ಭದಲ್ಲಿ ಈ ಮಲ್ಟಿ ಪಾಯಿಂಟ್ ಟ್ಯಾಕ್ಸ್ ಹಾಕಿದ್ದು ಒಂದು. ಇದರಿಂದ ಬಹಳವಾಗಿ ಆಹಾರ ಸಾಮಗ್ರಿಗಳ ಬೆಲೆ ನಿಜವಾಗಿ ಏರಿದೆ. ಅಲ್ಲದೆ ಈ ಕಂದಾಯವನ್ನು ವಿಶೇಷವಾಗಿ ವ್ಯಾಪಾರಸ್ಥರೇ ಸರ್ಕಾರಕ್ಕೆ ಕೊಡುವುದು. ಅಂತಹವರೇ ಈ ಸಮಯದಲ್ಲಿ ತಪ್ಪಿಸಿಕೊಳ್ಳುವ ಸಂದರ್ಭಗಳು ಅನೇಕವಾಗಿರುತ್ತವೆ. ಮೊಟ್ಟ ಮೊದಲನೆಯದಾಗಿ ಆಹಾರ ಪದಾರ್ಥಗಳಿಗೆ ಈ ಕಂದಾಯವನ್ನು ಹಾಕದಂತೆ ಮಾಡುವಂತಹ ಒಂದು ಅಭಿಪ್ರಾಯ ಸೆಲೆಕ್ಟ್ ಕಮಿಟಿಯವರಲ್ಲಿ ಮೂಡಬೇಕು. ಬಹುಶಃ ಈಗ ನಾವು ಈ ಕಂದಾಯದಿಂದ ನಮಗೆ ಎಷ್ಟು ಹಣ ಬರುತ್ತದೆ ಎಂಬ ದೃಷ್ಟಿಯನ್ನು ಇಟ್ಟು ಕೊಂಡಿದ್ದೇವೋ ಅಷ್ಟು ಹಣ ಖಂಡಿತವಾಗಿ ಬರುವುದಿಲ್ಲ. ಆದರೆ ಈ ಕಂದಾಯ

(ಶ್ರೀ ಎ. ಪಿ. ಅಪ್ಪಣ್ಣ)

ಹಾಕಲೇಬೇಕು. ಬಿಡಲಿಕ್ಕೆ ಹಾದಿ ಇಲ್ಲವೆಂಬ ಅಭಿಪ್ರಾಯ ಇದ್ದಿದ್ದೇ ಆದರೆ ಮಲ್ಟಿ ಪಾಯಿಂಟ್ ತೆಗೆದು ಸಿಂಗಲ್ ಪಾಯಿಂಟಿಗೆ ಟ್ಯಾಕ್ಸ್ ಹಾಕಿದ್ದೇ ಆದರೆ ಅದನ್ನು ವಸೂಲು ಮಾಡುವ ಕ್ರಮವಾದರೂ ಬಹಳ ಸುಲಭವಾಗಿರುತ್ತದೆ. ಹೀಗೆ ಮಾಡಿದರೆ ತೆರಿಗೆ ಕೊಡದೆ ತಪ್ಪಿಸಿಕೊಳ್ಳುತ್ತಿರುವವರ ಸಂಖ್ಯೆ ಯಾದರೂ ಕಡಿಮೆ ಯಾಗುತ್ತದೆಂದು ನನ್ನ ಅಭಿಪ್ರಾಯ. ಕೆಲವು ಕರಗಳನ್ನು ಈಗ ಸರ್ಕಾರದವರು ಏರಿಸಿದ್ದಾರೆ. ಜೀವನಕ್ಕೆ ಅತ್ಯವಶ್ಯಕವಾಗಿ ಬೇಕಾದಂತಹ ಪದಾರ್ಥ ಗಳ ಮೇಲೂ ತೆರಿಗೆಯನ್ನು ಏರಿಸಿದ್ದಾರ. ಜೀವನಕ್ಕೆ ಅತ್ಯವಶ್ಯವಾಗಿಲ್ಲದಂತಹ ಬಹುಶಃ ಅನುಕೂಲಸ್ಥರು ಉಪಯೋಗಿಸತಕ್ಕ ಅದರಲ್ಲೂ ಹಣವನ್ನು ವಿಪರೀತ ವಾಗಿ ಖರ್ಚು ಮಾಡತಕ್ಕ ಸಾಮಗ್ರಿಗಳ ಮೇಲೆ ಕಂದಾ ಯದ ರೇಟನ್ನು ಹೆಚ್ಚಿಸುವ ವಿಷಯ ಇವರ ಗಮನ ದಲ್ಲಿಲ್ಲವೆಂದೇ ನನಗೆ ಕಾಣುತ್ತದೆ. ಉದಾಹರಣೆಗೆ ಹೇಳುವುದಾದರೆ ಮೊದಲು ಸಿಮೆಂಟಿಗೆ ಇದ್ದಂಥ ಕಂದಾಯವನ್ನು ಅಂದರೆ ಶೇ. 5ರಷ್ಟು ಇದ್ದಂಥ ಕಂದಾಯವನ್ನು ಇದರಲ್ಲಿ ಶೇ. 6ಕ್ಕೆ ಏರಿಸಿದ್ದಾರೆ. ಆದರೆ ಮೊದಲಿನಿಂದ ಆಕ್ಟಿನಲ್ಲಿರುವಂತಹ ಷೆಡ್ಯೂಲ್ ಒಂದರಲ್ಲಿ ಇರುವ ಅನೇಕ ಐಟಂಗಳು ಜೀವನಕ್ಕೆ ಅತ್ಯವಶ್ಯಕ ವಾಗಿಲ್ಲದಿದ್ದರೂ ಅವುಗಳ ಮೇಲೆ ವಿಧಿಸಿರತಕ್ಕ ತೆರಿಗೆ ಶೇಕಡ 5ರಷ್ಟಿದ್ದರೂ ಅದನ್ನು ಹೆಚ್ಚಿಸುವುದಕ್ಕೆ ಇನ್ನೂ ಹೋಗಲಿಲ್ಲ. ಷೆಡ್ಯೂಲ್ ಒಂದರಲ್ಲಿ 38, 39, 40, 41–ಈ ಐಟಂಗಳಿಗೆಲ್ಲಾ ಇನ್ನೂ ತರಿಗೆ ರೇಟನ್ನು ಏರಿಸಲಲ್ಲ. ಇವಕ್ಕೆಲ ತೆರಿಗೆ ದರ ಶೇ. ಮೂರಿದ್ದರೆ ಸಿಮೆಂಟಿಗೆ ಶೇ. 5· ಇತ್ತು. ಈಗ ಸಿಮೆಂಟಿನ ತೆರಿಗೆ ದರವನ್ನು ಶೇ. 5 ರಿಂದ 6ಕ್ಕೆ ಏರಿಸಿದ್ದಾರೆ. ಆದರೆ ಆ ಶೇ. 3ರಷ್ಟು ತೆರಿಗೆ ಇರುವ ವಸ್ತುಗಳ ದರವನ್ನು ಏರಿಸದೆ ಅವುಗಳ ಗೋಜಿಗೇ ಹೋಗದಿರುವುದನ್ನು ಸೆಲೆಕ್ಟ್ ಕಮಿಟಿಯವರು ಕೂಲಂಕಷವಾಗಿ ವಿಚಾರ ಮಾಡಬೇಕು. ಅಲ್ಲದೆ ಇದರಲ್ಲಿ 64ನೇ ಐಟಂ ವಜ್ರ ಮತ್ತು ವೈಡೂರ್ಯಕ್ಕೆ ಶೇ. 5ರಷ್ಟು ತೆರಿಗೆ ಇದೆ. ಹೀಗೆ ಶೇ. 5ರಷ್ಟು ಇರತಕ್ಕದ್ದನ್ನು ಶೇ. 6ಕ್ಕೆ ಏರಿಸ ಬೇಕೆಂಬ ವಿಚಾರವನ್ನು ಗಣನೆಗೆ ತೆಗೆದುಕೊಳ್ಳದೆ ಈಗ ಅತ್ಯವಶ್ಯವಾಗಿರುವ ಸಿಮೆಂಟಿನ ಮೇಲೆ ತೆರಿಗೆ ಯನ್ನು ಶೇ. 5ರಿಂದ ಶೇ. 6ಕ್ಕೆ ಏರಿಸುವುದಕ್ಕೆ ಹೋಗಿದ್ದಾರೆ! ಅದು ಸರಿಯೇ ಎಂದು ನಾನು ಕೇಳಬೇಕಾಗಿದೆ. ಅತ್ಯವಶ್ಯಕವಾಗಿ ಮನುಷ್ಯನ ಜೀವನಕ್ಕೆ ನಿತ್ಯ ಬಳಕೆಯಲ್ಲಿರುವ ಆಹಾರ ಪದಾರ್ಥ ಗಳ ಮೇಲೆ ಇರತಕ್ಕ ತೆರಿಗೆಗಳನ್ನು ಕೂಡಲೇ ಕಡಮೆ ಮಾಡಬೇಕೇ ಹೊರತು ಹೆಚ್ಚು ಮಾಡುವ ಪ್ರಯತ್ನ ವನ್ನು ಆದಷ್ಟು ಜಾಗ್ರತೆ ನಿಲ್ಲಿಸಬೇಕು. ಜಾಸ್ತಿ ಕಂದಾಯ ಹಾಕುವುದಕ್ಕೆಬದಲಾಗಿ ಖರ್ಚು ಬಾಬನ್ನು, ವೃಥಾ ಖರ್ಚಾಗುತ್ತಿರುವ ಹಣವನ್ನು ಉಳಿಸಿ, ಅದನ್ನು ಪ್ರತಿಯೊಂದು ಅಭಿವೃದ್ಧಿ ಕಾರ್ಯಕ್ಕೆ ಉಪ ಯೋಗಿಸಬೇಕು. ನಿತ್ಯವಶ್ಯಕವಾಗಿಲ್ಲದ ಬೇರೆ ಬೇರೆ ಪದಾರ್ಥಗಳ ಮೇಲೆ ಹೆಚ್ಚಿನ ತೆರಿಗೆಯನ್ನು ವಿಧಿಸುವುದೇನೋ ಸರಿಯಾದುದು. ಅಂತಹ ಪದಾರ್ಥಗಳಿಗೆ ತೆರಿಗೆ ಹಾಕುವ ಗೋಜಿಗೆ ಹೋಗ ಬೇಕೇ ವಿನಾ ಜನರು ನಿತ್ಯ ಬಳಕೆಯಲ್ಲಿ ಜೀವನಕ್ಕಾಗಿ ಉಪಯೋಗಿಸುವ ಪದಾರ್ಥಗಳ ಮೇಲೆ ವಿಶೇಷವಾಗಿ ತೆರಿಗೆಯನ್ನು ವಿಧಿಸಬಾರದು. ಈಗಾಗಲೇ ನಮ್ಮ ದೇಶದಲ್ಲಿ ಆಹಾರ ಪದಾರ್ಥಗಳ ಬೆಲೆ ಏರಿಹೋಗಿ ಎಲ್ಲೆಲ್ಲೂ ಕೂಗಾಟ ಕೇಳಿಬರುತ್ತಿದೆ. ಮುಂದಕ್ಕೆ ಅದಿನ್ನೂ ಹೆಚ್ಚಾಗುತ್ತದೆ. ಇದರಿಂದ ಜನತೆಯಲ್ಲಿ ಒಂದು ದುಷ್ಪರಿಣಾಮವುಂಟಾಗಬಹುದು. ಈ ದೃಷ್ಟಿ ಯಿಂದ ಆಹಾರ ಪದಾರ್ಥಗಳ ಮೇಲೆ ಹಾಕುವ ತೆರಿಗೆಯನ್ನು ವಜಾಮಾಡಿ ಬೇರೆ ಪದಾರ್ಥಗಳ ಮೇಲೆ ಎಷ್ಟರಮಟ್ಟಿಗೆ ಹೇಗೆ ಕಂದಾಯಗಳನ್ನು ಏರಿಸುವುದು ಉಚಿತವೆಂಬುದನ್ನು ಸೆಲೆಕ್ಟ್ ಕಮಿಟಿಯ ವರು ನೋಡ ಬೇಕು ಎಂಬುದಾಗಿ ನಾನು ಹೇಳಬಯಸುತ್ತೇನೆ. ಮತ್ತೆ ಕೆಲವು ಪದಾರ್ಥಗಳ ಮೇಲೆ ಸಿಂಗಲ್ ಪಾಯಿಂಟ್ ಮಾರಾಟ ತೆರಿಗೆ ಇದ್ದುದ್ದನ್ನು ಕಡಮೆ ಮಾಡಿ ಮಲ್ಟಿ ಪಾಯಿಂಟ್ ಮಾರಾಟ ತೆರಿಗೆಯನ್ನು ಮಾಡಿದ್ದಾರೆ. ಉದಾಹರಣೆಗೆ ಟಿಂಬರ್ ತೆಗೆದು ಕೊಳ್ಳೋಣ. ಇದು ಮೊದಲು ಶೇಕಡ 3 ಇತ್ತು. ಸಿಂಗಲ್ ಪಾಯಿಂಟ್ ಸೇಲ್ಸ್ ಟ್ಯಾಕ್ಸ್ ; ಅದನ್ನು ಈಗ ಶೇಕಡ 2ಕ್ಕೆಇಳಿಸಿ ಮಲ್ಟಿ ಪಾಯಿಂಟ್ ಮಾಡಿದ್ದಾರೆ. ಇವತ್ತು ಮರದ ವ್ಯಾಪಾರ ವಿಶೇಷವಾಗಿ ಫಾರೆಸ್ಟ್ ಇಲಾಖೆ ಯಿಂದಲೇ ಆಗುತ್ತಿದೆಯೆಂದು ತಿಳಿಯಬಾರದು. ಕೊಡಗುಜಿಲ್ಲೆಯಲ್ಲಿ ಇವತ್ತು ಫಾರೆಸ್ಟ್ ಇಲಾಖೆಯಿಂದ ಎಷ್ಟು ಮರ ಹೋಗುತ್ತೋ ಅದರ ಅರ್ಧದಷ್ಟು ಮರ ಖಾಸಗೀ ವ್ಯಾಪಾರದಲ್ಲೂ ನಡೆಯುತ್ತಾ ಇದೆ. ಸ್ವಲ್ಪ ಭಾಗ ಮಾತ್ರ ಹೀಗೇನೆ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಹೋಗುತ್ತಿದೆ. ಒಳ್ಳೆಯ ಮರಗಳು ಅರಣ್ಯ ಇಲಾಖೆ ಯಿಂದ ಮಾರಾಟವಾಗುತ್ತಿವೆ. ನನ್ನ ಅಭಿಪ್ರಾಯ ಈ ಬಗ್ಗೆ ಹೇಳುವುದಾದರೆ ಕೊಡಗಿನಲ್ಲಿ ಮರದ ವ್ಯಾಪಾರ ದಲ್ಲಿ ಮಾರಾಟ ತೆರಿಗೆಯನ್ನು ಬಹಳ ಜನರು ಕೊಡ ದೆಯೇ ಈ ವ್ಯಾಪಾರವನ್ನು ಮಾಡುತ್ತಾ ಇದ್ದಾರೆ. ಮರದ ವ್ಯಾಪಾರ ಮಾಡುವವರು ರಿಜಿಸ್ಟರ್ ಮಾಡಿಸ ದೆಯೇ ವ್ಯಾಪಾರ ಮಾಡುತ್ತಿರುವವರು ಅಲ್ಲಿ ಬಹಳ ಜನರಿದ್ದಾರೆ. ಇವತ್ತೂ ಅಲ್ಲಿ ಸರ್ಕಾರಕ್ಕೆ ಇನ್‌ಕಂ ಟ್ಯಾಕ್ಸ್ ಮತ್ತು ಸೇಲ್ಸ್ ಟ್ಯಾಕ್ಸ್ ಕೊಡದೇ ಇರುವ ವರು ಬೇಕಾದಷ್ಟು ಜನರು ಇದ್ದಾರೆ. ಅಂತಹ ಕಡೆ ಗಳಲ್ಲಿ ಸಿಂಗಲ್ ಪಾಯಿಂಟ್ ಇರುವುದನ್ನು ಮಲ್ಟಿ ಪಾಯಿಂಟ್ ಮಾಡಿದರೆ ಅಂತಹವರಿಗೆ ಇನ್ನೂ ಹೆಚ್ಚಿಗೆ ತಪ್ಪಿಸಿಕೊಳ್ಳುವುದಕ್ಕೆ ಅವಕಾಶವನ್ನು ಕಲ್ಪಿಸಿ ಕೊಟ್ಟಂತಾಗುತ್ತದೆ. ಅದರಿಂದ ಹೆಚ್ಚು ಕಂದಾಯ ಬರುವುದಿಲ್ಲ. ಅನೇಕ ನಷ್ಟವನ್ನು ಇದರಿಂದ ಸರ್ಕಾರ ಹೊಂದುತ್ತದೆಯೆಂದ ನಾನು ಹೇಳುತ್ತೇನೆ. ಆದ್ದ ರಿಂದ ಈ ಮರದ ವ್ಯಾಪಾರಕ್ಕೆಹೆಚ್ಚಿನ ಕಂದಾಯವನ್ನು ಹಾಕಬೇಕು ಇದರಲ್ಲಿ ಸಿಂಗಲ್ ಪಾಯಿಂಟ್ ತಪ್ಪಿಸಿ ಮಲ್ಟಿ ಪಾಯಿಂಟ್‌ನಲ್ಲಿ ಸೇಲ್ಸ್ ಟಾಕ್ಸ್ ಹಾಕಿ ದರೆ ಅನೇಕ ಮರದ ವ್ಯಾಪಾರಸ್ಥರಿಂದ ಕಂದಾಯವನ್ನು ಸರಿಯಾಗಿ ವಸೂಲು ಮಾಡಿ ಸರ್ಕಾ ರಕ್ಕೆ ಹಣವನ್ನು ಪಾವತಿ ಮಾಡದೇ ಹೋಗತಕ್ಕಂತಹ ಸಂದರ್ಭಗಳು ಬಂದೇ ಬರುತ್ತವೆಂದು ನಾನು ಹೇಳು ತ್ತೇನೆ.

Mr. SPEAKER.—The House will now rise and meet again after half-an-hour.

The House adjourned for Recess at Three of the Clock and reassembled at Thirty Minutes past Three of the Clock.

(MR. SPEAKER in the Chair.)

ಶ್ರೀ ಎ. ಪಿ. ಅಪ್ಪಣ್ಣ.—ಮಾನ್ಯ ಸಭಾಪತಿಗಳೇ, ನಾವು ಟಿಂಬರಿನ ಮೇಲೆ ಮಲ್ಟಿ ಪಾಯಿಂಟು ಟ್ಯಾಕ್ಸನ್ನು ಹಾಕಿ ಕಂದಾಯವನ್ನು ವಸೂಲು ಮಾಡಿದರೆ, ವ್ಯಾಪಾರಸ್ಥರು ಸರಕಾರಕ್ಕೆ ಸಲ್ಲಿಸದೇ ಆ ಕಂದಾಯವನ್ನು ಅವರೇ ಉಪಯೋಗಿಸಿಕೊಳ್ಳುವ ಪರಿಸ್ಥಿತಿ ಬರುತ್ತದೆ. ಆದುದರಿಂದ ಸಾಧ್ಯವಾದಷ್ಟು ಮಟ್ಟಿಗೆ ವಸ್ತುಗಳ ಮೇಲೆ ಸಿಂಗಲ್ ಪಾಯಿಂಟು ಸೇಲ್ಸ್ ಟ್ಯಾಕ್ಸು ಹಾಕಿದರೆ, ಒಳ್ಳೆಯದು.

Sri B. CHANNABYRE GOWDA (Hosakote).—I rise to a point of order, Sir.

ಸ್ವಾಮೀ, ಈ ದೇಶದಲ್ಲಿ ವಿಧಿಸತಕ್ಕಂತಹ ಕಂದಾಯದ ಪ್ರಶ್ನೆ ಬಹಳ ಮುಖ್ಯವಾದ ಪ್ರಶ್ನೆ. ಅಂತಹದರಲ್ಲಿ ಈ ದಿವಸ ಈ ಸಭೆಯಲ್ಲಿ "ಅರ್ಧ" ಮಂತ್ರಿಗಳೊಬ್ಬರು ಮಾತ್ರ ಇರುತ್ತಾರೆ. ಯಾವಾಗಲೂ ಇಲ್ಲಿ ಪೂರ್ತಿಮಂತ್ರಿಗಳಿರುವುದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕು.

Mr. SPEAKER.—I discourage the idea of saying "ಅರ್ಧ ಮಂತ್ರಿಗಳು" and all that, what does the member mean by that ?

There is no point of order.

ಶ್ರೀ ಎ. ಪಿ. ಅಪ್ಪಣ್ಣ.—ಸ್ವಾಮೀ, ಆದ್ದರಿಂದ ಸಾಧ್ಯವಾದಷ್ಟು ಮಟ್ಟಿಗೂ ಸಿಂಗಲ್ ಪಾಯಿಂಟು ಸೇಲ್ಸ್ ಟ್ಯಾಕ್ಸನ್ನು ಹಾಕುವುದು ಒಳ್ಳೆಯದೆಂದು ಇಲ್ಲಿ ಹೇಳಬಯಸುತ್ತೇನೆ. ಈ ರೀತಿ ಮಾರಾಟತೆರಿಗೆಯಲ್ಲಿ ನಮ್ಮ ಸರಕಾರಕ್ಕೆ ಬರುವ ಉತ್ಪತ್ತಿ ಬಹಳ ದೊಡ್ಡದಾಗಿದೆ. ಆದರೆ ಈ ಕಂದಾಯವನ್ನು ಎಷ್ಟೋ ಜನ ಹಾಗೇ ಕೊಡದೇ ಇದ್ದಾರೆ. ಲೆಕ್ಕವನ್ನು ತೆಗೆದರೆ ಇದರಲ್ಲಿ ಎಷ್ಟು ಉತ್ಪತ್ತಿ ಬರುತ್ತದೆಯೋ ಆ ಉತ್ಪತ್ತಿಯ ಅರ್ಧದಷ್ಟು ಜನರಿಂದ ಬರಬೇಕಾದ ತೆರಿಗೆ ಬರುತ್ತಿಲ್ಲ. ಆದ್ದರಿಂದ ಸಿಂಗಲ್ ಪಾಯಿಂಟು ಸೇಲ್ಸ್‌ಟ್ಯಾಕ್ಸು ಹಕಿದ್ದೇ ಆದರೆ, ಈ ರೀತಿಯಾಗಿ ವಂಚನೆ ಮಾಡುವ ಕಾರಣವಿರುವುದಿಲ್ಲ. ಇಂತಹ ಅವಕಾಶ ಸರಕಾರಕ್ಕೆ ಈ ಸಿಂಗಲ್ ಪಾಯಿಂಟ್ ತೆರಿಗೆಯಿಂದ ಸಿಕ್ಕೇಸಿಕ್ಕುತ್ತದೆ.

ಮತ್ತೆ ಇದರಲ್ಲಿ ಇನ್ನೊಂದು ವಿಚಾರ ನಾನು ಹೇಳಬಯಸುವುದು "Retrospective effect" ಎಂದು ಕಲೆಕ್ಟು ಮಾಡಿದರೆ ಸರಿಯಾಗಿರುವುದಿಲ್ಲ. ಈಗ ಹಾಕಿರುವ ಕಂದಾಯವನ್ನು ಎಷ್ಟೋ ವ್ಯಾಪಾರಸ್ಥರು ಇದನ್ನು ವಸೂಲುಮಾಡದೇ ಇದ್ದರೂ ಇದನ್ನು ಅವರ ಜೋಬಿನಿಂದಲೇ ಕೊಡುತ್ತಿದ್ದಾರೆ. ಕೊಡುವುದಕ್ಕೆ ಚೈತನ್ಯ ಇರುವವರು ಹೇಗಾದರೂ ಕೊಡಹುದು, ಇನ್ನೊಂದು ದೃಷ್ಟಿಯಿಂದ ನೋಡಿದರೆ, ಒಬ್ಬ ವ್ಯಾಪಾರಿ ಈಗಿರುವ ಕಾನೂನು ಪ್ರಕಾರ ಶೇಕಡ ನಾಲ್ಕರಷ್ಟು ಎಂದು ತೆರಿಗೆ ಕಲೆಕ್ಟುಮಾಡಿರುತ್ತಾನೆ. ಇವೊತ್ತು ಈ ತಿದ್ದುಪಡಿ ಮಸೂದೆಯಿಂದ ಶೇಕಡ ಎರಡರಷ್ಟು ಎಂದು ಮಾಡಿದ್ದಾರೆ, ಶೇಕಡ ನಾಲ್ಕರಂತೆ ವಸೂಲುಮಾಡಿಕೊಂಡಿದ್ದರೂ ಸರಕಾರಕ್ಕೆ ಕೊಡುವುದು ಶೇಕಡ ಎರಡರಷ್ಟು ಮಾತ್ರ. ಇನ್ನು ಶೇಕಡ ಎರಡರಷ್ಟು ವ್ಯಾಪಾರಿಯಲ್ಲೇ ಉಳಿಯುತ್ತದೆ. ಇದಕ್ಕೆ ಒಂದು ನಿದರ್ಶನ ಹೇಳುವುದಾದರೆ ಈಗಾಗಲೇ ಮಾರಾಟ ತೆರಿಗೆ ಕಂದಾಯ ಶೇಕಡ ಮೂರರಷ್ಟು ಎಂದು ಇದ್ದುದ್ದನ್ನು ಈಗಾಗಲೇ ಶೇಕಡ ಎರಡರಷ್ಟು ಎಂದು ಮಾಡಲಾಗಿದೆ. ಶೇಕಡಾ ಮೂರರಷ್ಟು ಎಂದು ಈ ಮೊದಲೇ ಕಲೆಕ್ಟು ಮಾಡಿರುತ್ತಾರೆ. ಆದರೆ ಮಸೂದೆಯ ಪ್ರಕಾರ ಸರಕಾರಕ್ಕೆ ಬರುವುದು ಶೇಕಡಾ ಎರಡು ಪರ್ಸೆಂಟು ಮಾತ್ರ. ಮೊದಲು ವಸೂಲು ಮಾಡಿದ ಒಂದು ಪರ್ಸೆಂಟು ವ್ಯಾಪಾರಸ್ಥನಲ್ಲೇ ಉಳಿಯುತ್ತದೆ. ಆದ್ದರಿಂದ ಇಲ್ಲಿ Retrospective ಎಂದು ಹಾಕಿರುವುದನ್ನು ತೆಗೆಯುವುದೊಳ್ಳೆಯದು ಎಂದು ನನ್ನ ಸಲಹೆ.

ಇದರಲ್ಲಿ ಜನ ಜೀವನಕ್ಕೆ ಅತ್ಯವಶ್ಯಕವಾಗಿರತಕ್ಕ ಆಹಾರ ಪದಾರ್ಥಗಳ ಮೇಲೆ ಈ ಕಂದಾಯವನ್ನು ಹಾಕದ ರೀತಿಯಲ್ಲಿ ಈ ಮಸೂದೆಯನ್ನು ತಿದ್ದುಪಾಟು ಮಾಡಲಿಕ್ಕೆ ಪ್ರಯತ್ನಮಾಡುವುದು ಉತ್ತಮ. ಹಾಗಿಲ್ಲದೆಯಿದ್ದರೆ ಸಾಧ್ಯವಿಲ್ಲ. ಅಲ್ಲದೆ ಸಿಂಗಲ್ ಪಾಯಿಂಟು ಸೇಲ್ಸ್‌ಟ್ಯಾಕ್ಸು ಹಾಕುವಂತೆ ಮಾಡಲು ಸರಕಾರ ಗಮನಿಸಬೇಕೆಂದು ಹೇಳಿ ಈ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಎಲ್. ಗೌಡ. (ಚಳ್ಳಕೆರೆ)—ಇದ್ದವರ ಪೈಕಿ ಒಬ್ಬರು ಮಂತ್ರಿಗಳು ಹೊರಟು ಹೋದರು ಇನ್ನೊಬ್ಬರೇ ಉಳಿದುಕೊಂಡಿರುವವರು. ನಾವು ಹೇಳುವುದೆಲ್ಲಾ ಹೇಳಿ, ಅವರು ಇಲ್ಲದೇ ಇದ್ದರೆ ಏನು ಪ್ರಯೋಜನ ?

Mr. SPEAKER.—I will look into it.

†ಶ್ರೀ ಬಿ. ಭಾಸ್ಕರಶೆಟ್ಟಿ (ಕಾಪು).—ಮಾನ್ಯ ಸಭಾಧ್ಯಕ್ಷರೇ, ಇಂದಿನ ದಿವಸ ಬಹಳ ಮಹತ್ತರವಾದ ಎಂದರೆ ನಮ್ಮ ಈ ಮೈಸೂರು ದೇಶದ ಅತಿ ಬಡವರಿಂದ ಮಾತ್ರವಲ್ಲದೆ ಮಧ್ಯಮವರ್ಗದ ಜನತೆಯ ಮೇಲೆ ಹೆಚ್ಚಿನ ಭಾರವಾದ ಒಂದು ತೆರಿಗೆ ಹೊರೆಯನ್ನು ಬೀಳಿಸುವಂಥ ಈ ಸೇಲ್ಸ್‌ಟ್ಯಾಕ್ಸ್ ಸೆಕೆಂಡ್ ಅಮೆಂಡ್‌ಮೆಂಟ್ ಬಿಲ್ ಈಗ ನಮ್ಮ ಮುಂದೆ ಚರ್ಚೆಗೆ ಇದೆ. ಇಂಥಾ ಒಂದು ಮಹತ್ತರವಾದ ಈ ಬಿಲ್ಲು ಈ ವಿಧಾನಸಭೆಯ ಮುಂದೆ ಚರ್ಚೆಗೆ ಇರುವ ಈ ಸಂದರ್ಭದಲ್ಲಿ ನಮ್ಮ ಸರ್ಕಾರದ ಮಾನ್ಯ ಮಂತ್ರಿಗಳು ಹೆಚ್ಚಾಗಿ ಇದರ ಮೇಲೆ ಯಾವ ಒಂದು ಪರಿಣಾಮ ಉಂಟಾಗುತ್ತದೆಂಬುದನ್ನು ನೆನೆಸದೇ ಸಭೆಯಿಂದ ಹೊರಗಡೆ ಇರುವುದನ್ನು ನೋಡಿದರೆ ನಮ್ಮ ದೇಶವನ್ನು ಅವರು ಈ ರೀತಿಯ ಚಾಲು ಚಲನೆಯಿಂದ ಯಾವ ರೀತಿಯಾಗಿ ಮುಂದಕ್ಕೆ ತಂದಾರು ಎಂಬ ಭಯ ನಮ್ಮ ಮುಂದೆ ಹುಟ್ಟಿದೆ. ಅಧ್ಯಕ್ಷರೇ ಈಗ ನಾನು ಹೇಳಿದಂತೆ ಈ ಸೇಲ್ಸ್‌ಟ್ಯಾಕ್ಸಿನಿಂದ ಹೆಚ್ಚಾಗಿ ನಮ್ಮ ದೇಶದ ಬಡಜನತೆಗೆ ಮಾತ್ರವಲ್ಲದೆ ಮಧ್ಯಮವರ್ಗದವರ ಹೊಟ್ಟೆ ಮೇಲೂ ನಮ್ಮ ಸರ್ಕಾರವು ಕಾಲು ಇಟ್ಟಂತಾಗಿದೆ. ಸಮಾಜವಾದಿ ಮಾದರಿಯ ಸಮಾಜ ಎಂಬ ಕೂಗನ್ನು ಹೇಳಿ ನಮ್ಮ ಕಾಂಗ್ರೆಸ್ ಮಿತ್ರರು ಇಂದು ಈ ನಮ್ಮ ಸಮಾಜಕ್ಕೆ ಒಂದು ದೊಡ್ಡ ವ್ಯಾಧಿಯನ್ನು ತಂದೊಡ್ಡಿದ್ದಾರೆ ಎಂದರೆ ಅತಿಶಯೋಕ್ತಿಯಾಗಲಾರದು. ಅವರು ಎಲ್ಲಿಯವರೆಗೆ ಈ ಕರಭಾರವನ್ನು ಜನತೆ ಮೇಲೆ ಹೇರಿದ್ದಾರೆ ಎಂದರೆ ಒಂದು ಮಗು ಗರ್ಭದಿಂದ ಹುಟ್ಟಿದಂದಿನಲಾಗಾಯ್ತು, ಅಂದರೆ ಅದು ಗರ್ಭದಿಂದ ಹೊರಗಡೆ ಬಿದ್ದು ಆಮೇಲೆ ಅದು ತನ್ನ ಜೀವನವನ್ನು ಈ ಸರ್ಕಾರದ ಅಡಿಯಲ್ಲಿ ನಡೆಸಿ ಅದು ಸತ್ತ ಹೆಣವಾದ ಮೇಲೂ ಅದರ ಮೇಲೆ ಟ್ಯಾಕ್ಸ್ ಹೊರಿಸಲಿಕ್ಕೆ ಷುರು ಮಾಡಿದ್ದಾರೆ ಎಂದರೆ ಇಂಥ ಒಂದು ದೊಡ್ಡ ಗಂಡಾಂತರದ ಪರಿಸ್ಥಿತಿಯನ್ನು ನಮ್ಮ ದೇಶಕ್ಕೆ ಅವರು ತಂದೊಡ್ಡಿದ್ದಾರೆ ಎಂದರೆ ಹೆಚ್ಚಿನ ಅತಿಶಯೋಕ್ತಿ

(ಶ್ರೀ ಬಿ. ಭಾಸ್ಕರಶೆಟ್ಟಿ)

ಆಗಲಾರದು. ಏಕೆಂದರೆ ಹೆಚ್ಚಾಗಿ ನಮ್ಮ ಹಳ್ಳಿಗಳಲ್ಲಿ ಸತ್ತ ಹೆಣವನ್ನು ಸುಡಲಿಕ್ಕೆ ಕಟ್ಟಿಗೆ ಉಪಯೋಗಿಸುತ್ತಾರೆ. ಇಂದು ತಮ್ಮ ಸರ್ಕಾರ ಈ ಒಂದು ಕಟ್ಟಿಗೆ ಮೇಲೂ ಕರಭಾರವನ್ನು ಹೇರಿ ಆ ಒಂದು ಯಮ ಧರ್ಮರಾಯನ ಕೆಲಸ ಏನಿದೆ-ಸತ್ತ ಮೇಲೆ ಹೆಣದ ಮೇಲಿನ ಅಧಿಕಾರ ಯಮನದು-ಆ ಯಮ ಧರ್ಮ ರಾಯನಿಗೂ ಕೂಡ ಅಡ್ಡ ಬಂದಿದ್ದಾರೆ.

Mr. SPEAKER.—Has the member seen that person ?

ಶ್ರೀ ಬಿ. ಭಾಸ್ಕರಶೆಟ್ಟಿ.—ಆ ರೀತಿ ಹೇಳುತ್ತಾರೆ ಸ್ವಾಮಿ?

Mr. SPEAKER.—Please do no continue that point, but continue the speech.

ಶ್ರೀ ಬಿ. ಭಾಸ್ಕರಶೆಟ್ಟಿ.—ಈ ಕರವನ್ನು ಹೇರುವ ಈ ಬಿಲ್‌ನ್ನು ಕೂಲಂಕಷವಾಗಿ ಪರಿಶೀಲಿಸಿದರೆ ಇದರಲ್ಲಿ ಜನರಿಗೆ ಜೀವನಕ್ಕೆ ಅವಶ್ಯಕವಾದ ವಸ್ತುಗಳಾದ ಅಕ್ಕಿ, ಗೋಧಿ, ರಾಗಿ, ಮೈದಾ, ನವಣೆ, ಜೋಳ ಇವುಗಳ ಮೇಲೆಲ್ಲಾ ಅಧಿಕವಾದ ಕರಭಾರವನ್ನು ನಮ್ಮ ಸರ್ಕಾರದವರು ಹೇರಿದ್ದಾರೆ. ನಮ್ಮ ಮಿತ್ರರು ನಿಜವಾಗಿಯೂ ಈ ಕರಭಾರವನ್ನು ಹೇರುವ ವಿಷಯ ಜನತೆಯ ಮುಂದೆ ಎಂದರೆ ಎಲೆಕ್ಷನ್ ಟೈಂನಲ್ಲಿ ಈ ತರಹವಾದ ಕರಭಾರವನ್ನು ಆಹಾರ ಸಾಮಗ್ರಿಗಳ ಮೇಲೆ ಹೇರುತ್ತೇವೆ ಎಂದು ಮುಂದಾಗಿ ಹೇಳಿದ್ದರೆ ಖಂಡಿತವಾಗಿಯೂ ಹೇಳುತ್ತೇನೆ; ಈ ಮಿತ್ರರೆಲ್ಲಾ ಎಲೆಕ್ಟ್ ಆಗಿ ಬರುತ್ತಿರಲಿಲ್ಲ. ಆ ಸಮಯದಲ್ಲಿ ಅವರು ಏನೋ ಒಂದು ಕುಚೇಲನ ಪಾತ್ರ ವಹಿಸಿ ಜನರ ಹತ್ತಿರ ಹೋಗಿ ಓಟು ಬೇಡಿಕೊಂಡು ಈಗ ಅಧಿಕಾರಕ್ಕೆ ಬಂದ ಮೇಲೆ ಕುಂಭಕರ್ಣನ ಹಾಗೆ ಆಗಿದ್ದಾರೆ. ಜನರನ್ನು ವಂಚಿಸುತ್ತಿದ್ದಾರೆ ಎಂದರೆ......

Mr. SPEAKER.—Please discontinue such analogies and come to the point.

ಶ್ರೀ ಬಿ. ಭಾಸ್ಕರಶೆಟ್ಟಿ.—ಒಂದು ಉದಾಹರಣೆ ಕೊಡುತ್ತೇನೆ. ಒಬ್ಬ ಫಿಲಂ ಪ್ರೊಡ್ಯೂಸರ್ ಕುಚೇಲನ ಫಿಲಂ ತೆಗೆಯಬೇಕೆಂದು ಹೇಳಿ ಅದಕ್ಕೆ ಸರಿಯಾದ ಒಬ್ಬನನ್ನು ಗೊತ್ತುಮಾಡಬೇಕೆಂದು ಎರಡು ಮೂರು ದಿವಸ ರಸ್ತೆಯಲ್ಲಿ ತಿರುಗುತ್ತಾ ಇದ್ದನಂತೆ, ಒಂದು ದಿನ ಹಾಗೆ ಹೋಗುತ್ತಿದ್ದಾಗ ಒಬ್ಬ ಬಹಳ ತೆಳ್ಳಗಿರುವ ಶರೀರದ ಭಿಕ್ಷುಕನನ್ನು ನೋಡಿ ಕುಚೇಲನ ಪಾತ್ರಕ್ಕೆ ಇವನೇ ಸಮರ್ಥನಾದ ಮನುಷ್ಯಅಂತ ಹೇಳಿ 6 ತಿಂಗಳ ಮೇಲೆ ಕುಚೇಲನ ಫಿಲಂ ತೆಗೆಯುತ್ತೇನೆ ಆಗ ಬರಬೇಕು ಎಂದು ಹೇಳಿ ಅವನಿಗೆ 10 ಸಾವಿರ ರೂಪಾಯಿ ಅಡ್ವಾನ್ಸ್ ಮಾಡಿದ. 6 ತಿಂಗಳಾದ ಮೇಲೆ ಫಿಲಂ ಪ್ರೊಡ್ಯೂಸರ್ ಆ ಕುಚೇಲನ ಪಾತ್ರ ವಹಿಸುವ ವ್ಯಕ್ತಿಯ ಬಳಿಗೆ ಹೋದಾಗ ಅವನು ಆ 10 ಸಾವಿರ ರೂಪಾಯಿ ತಿಂದು ಕುಂಭಕರ್ಣನ ಹಾಗೆ ಆಗಿದ್ದ. ಅವನು ಯೋಚನೆ ಮಾಡಿದ ಏನು ಮಾಡುವುದು ಅಂತ. ಆಗ ಕೊಟ್ಟುಬಿಟ್ಟೆ ಈಗ ಏನು ಮಾಡುವುದು ನನ್ನ ಹಣ ಹೋಗುತ್ತದೆಯಲ್ಲಾ ಎಂತ ಆಲೋಚನೆ ಮಾಡಿ ಕಟ್ಟಕಡೆಗೆ ಕುಂಭಕರ್ಣನ ಚಿತ್ರವನ್ನೇ ತೆಗೆಯೋಣ ಅಂತ ಯೋಚನೆ ಮಾಡಿದನಂತೆ. ಹಾಗೆಯೇ ನೀವು ಎಲೆಕ್ಷನ್ ಟೈಂನಲ್ಲಿ ನಾವು ಬಡವರ ಬಂಧುಗಳು ಸಮಾಜವಾದ ಮಾದರಿ ಸಮಾಜ ರಚನೆ ಮಾಡುತ್ತೇವೆ, ಲೋಕದಲ್ಲಿ ರಾಮರಾಜ್ಯ ಸ್ಥಾಪನೆ ಮಾಡುತ್ತೇವೆ, ಎಲ್ಲರಿಗೂ ಸುಭಿಕ್ಷವಾಗುವಂತೆ ಮಾಡುತ್ತೇವೆ ಎಂದು ಹೇಳಿಕೊಳ್ಳುತ್ತಿದ್ದಾಗ ಕುಚೇಲನಂತಿದ್ದ, ಈ ಕಾಂಗ್ರೆಸ್ ಮಿತ್ರರು ಯಾರಿದ್ದಾರೆ ಅಷ್ಟೇಕೆ ಈ 27 ಜನ ಮಂತ್ರಿಗಳು ಇಂದು ಕುಂಭ ಕರ್ಣರಂತಾಗಿರುವುದರಿಂದ ಚಿತ್ರ ಮತದಾರರು ಇಂದಿನ ಪರಿಸ್ಥಿತಿಗೆ ತಕ್ಕ ಹಾಗೆನೋಡ ಬೇಕಲ್ಲದೆ ಬೇರೆ ಉಪಾಯವಿಲ್ಲ ಎಂದು ಹೇಳಬೇಕಾಗಿದೆ. ಕೇಂದ್ರ ಸರ್ಕಾರದ ಜಾನ್ ಮಥಾಯ್ ಟ್ಯಾಕ್ಸೇಷನ್ ಎಂಕ್ವೈರಿ ಕಮಿಟಿಯವರು ಆಹಾರ ಧಾನ್ಯಗಳ ಮೇಲೆ ಟ್ಯಾಕ್ಸ್ ವಿಧಿಸಬಾರದು ಎಂದು ಹೇಳಿ ರಿಪೋರ್ಟ್ ಮಾಡಿದ್ದಾರೆ. ವಿಧಿಸುವುದಾದರೂ ಅರ್ಧ ಪರ್ಸೆಂಟ್ ಟ್ಯಾಕ್ಸ್ ವಿಧಿಸಬೇಕೆಂದು ಅವರು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದ್ದಾರೆ. ನಮ್ಮ ಮೈಸೂರು ಸರ್ಕಾರದವರು ಯಾವ ಒಂದು ದಯಾ ದಾಕ್ಷಿಣ್ಯಕ್ಕೂ ಒಳಗಾಗದೇ ಬಡವರ ಪರಿಸ್ಥಿತಿಯನ್ನೂ ಗಮನಿಸದೇ ಈ ತೆರನಾಗಿ ನಿತ್ಯ ಉಪಯೋಗ ವಸ್ತುಗಳ ಮೇಲೆ ಹೊರಿಸುವ ಕರಭಾರವನ್ನು ನೋಡಿದರೆ ನಿಜವಾಗಿಯೂ ನನಗೆ ಅನ್ನಿಸುತ್ತದೆ ಅವರಿಗೆ ಒಂದು ಚೂರೂ ನಮ್ಮ ಮೈಸೂರು ರಾಜ್ಯದ ಬಡಜನರ ಮೇಲೆ ಪ್ರೀತಿ ಇಲ್ಲ ಎಂದು. ಇಷ್ಟು ಮಾತ್ರವಲ್ಲದೇ ಬಡಜನರು ಅವರನ್ನು ನಂಬಿ ಒಳ್ಳೆ ರೀತಿಯಲ್ಲಿ ಸುಖರಾಜ್ಯದಲ್ಲಿ ಬಾಳುವಂತ ಇಲ್ಲ ಎಂದು ಹೇಳಬೇಕಾಗುತ್ತದೆ. ಅಂತೂ ಇವರಿಗೆ ಹಣ ಬೇಕು. 42 ಕೋಟಿ ರೂಪಾಯಿಗಳನ್ನು ಯಾವ ರೀತಿಯಿಂದಾದರೂ ತುಂಬಬೇಕು ಅಂತ ಹೇಳಿ ಇದ್ದಿದ್ದರಲ್ಲೇ ಬೇರೆ ವಿಧಾನವನ್ನು ಇವರು ಅನುಸರಿಸಬಹುದಾಗಿತ್ತು. ಈಗಾಗಲೇ ನನ್ನ ಕೆಲವು ಮಿತ್ರರು ಹೇಳಿದಂತೆ ಜನರ ನೈತಿಕ ಮಟ್ಟವನ್ನು ಅಧೋಗತಿಗೆ ಇಳಿಸುತ್ತಿರುವ ಪ್ರೊಹಿಬಿಷನ್‌ನಿಂದ ಸಾಧಾರಣ 15 ಕೋಟಿ ರೂಪಾಯಿ ಬರುತ್ತದೆ ಎಂದು ಶ್ರೀಮಾನ್ ನಾಮೋಷಿಯವರು ಮೊನ್ನೆ ಹೇಳಿದರು. ಮಾತ್ರವಲ್ಲದೇ ಕೆಲವು ಬಾಬುಗಳಲ್ಲಿ ಲೀಕೇಜಸ್ ಇದೆ. ಬಾಕಿ ಬರಬೇಕಾಗಿರತಕ್ಕ ಬಾಬುಗಳೂ ಇರುತ್ತವೆ. ರೋಡ್ ಟ್ರಾನ್ಸ್ ಪೋರ್ಟ್‌ನ ಆಡಳಿತದಲ್ಲಿ ಹಿಡಿತ ಬಿಗಿ ಮಾಡಿದರೆ ಬಹಳ ಹಣ ಸಿಕ್ಕುತ್ತದೆ. 1957ನೇ ಇಸವಿಯಲ್ಲಿ ನಮಗೆ ಸಾಧಾರಣ 5 ಕೋಟಿ ರೂಪಾಯಿ ಟ್ಯಾಕ್ಸ್ ಇದ್ದದ್ದು ಅದು ಬರ ಬರುತ್ತಾ 1961ರಲ್ಲಿ 9 ಕೋಟಿ ರೂಪಾಯಿಗಳವರೆಗೂ ಏರಿದೆ. ಹೀಗೆಯೇ ಇದು ಬರಬರುತ್ತಾ ದಿನ ದಿನಕ್ಕೆ ಹೆಚ್ಚಾಗುತ್ತದೆ.

ಜನರ ನಿತ್ಯ ಉಪಯೋಗದ ಅವಶ್ಯಕ ವಸ್ತುಗಳಾದ ಆಹಾರ ಧಾನ್ಯಗಳು, ಏಕದಳ ಧಾನ್ಯಗಳು, ಮೆಣಸು, ರೈತರಿಗೆ ಹೆಚ್ಚು ಪ್ರಯೋಜನವಾಗುವ ಗೊಬ್ಬರ, ದನಕರುಗಳಿಗೆ ಹಳ್ಳಿಗಳಲ್ಲಿ ಹೆಚ್ಚಾಗಿ ಉಪಯೋಗಿಸುವ ಹಿಂಡಿ ಇವುಗಳಮೇಲಾದರೂ ದಯ ಮಾಡಿ ಕರಭಾರವನ್ನು ಹೇರಬಾರದಾಗಿ ಈ ಸಂದರ್ಭದಲ್ಲಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರೆ, ನಮ್ಮ ಮಿತ್ರರು ಹೇಳಿದಂತೆ ಹೆಚ್ಚಾಗಿ ಕರಭಾರವನ್ನು ಹೊಸದಾಗಿ ಹೇರುವುದಕ್ಕಿಂತಲೂ ಗಾಂಧಿ ಭಕ್ತರು ಒಬ್ಬೊಬ್ಬರಿಂದ ಸರ್ಕಾರಕ್ಕೆ ಬರಬೇಕಾದ ತೆರಿಗೆಯನ್ನು ಕೊಡದೆ ಅವರು ಇಲ್ಲಿಯ ತನಕ ತಪ್ಪಿಸಿಕೊಂಡಿರುವವರಿಂದಅವರಿಂದ ಬರಬೇಕಾದ್ದನ್ನು ವಸೂಲು ಮಾಡಿದ್ದರೆ ಅಥವಾ ನಮಗೆ ತಿಳಿದಿರುವ ವಿಚಾರವನ್ನು ಪೋಲೀಸರಿಗೆ ಅಥವ ಇತರರಿಗೆ ತಿಳಿಸಿದಾಗ ತಪ್ಪಿತಸ್ಥರನ್ನು ಹಿಡಿಯುವ ಭರವಸೆ ಕೊಟ್ಟಿದ್ದರೆ ಖಂಡಿತ ಈ ರಾಜ್ಯದಲ್ಲಿ ಜನರು ಹೊಸ ಕರ ಹೊರಬೇಕಾಗಿರಲಿಲ್ಲ ಎಂದು ಹೇಳುತ್ತೇನೆ. ಹಾಗೆ

ಮಾಡುವುದಿಲ್ಲ. ಗಾಂಧಿ ಭಕ್ತರ ವಿಷಯದಲ್ಲಿ ಸರ್ಕಾರದವರು ಕೈಹಾಕುವುದಿಲ್ಲ. ಅವರ ನೆರಳಲ್ಲಿ ತಾವು ಉಳಿದುಕೊಳ್ಳಬೇಕಾಗಿದೆ ಮತ್ತು ಕಾಳಸಂತೆಯಲ್ಲಿ ಅವರು ಗಳಿಸುವುದರಲ್ಲಿ ಇವರಿಗೂ ಸ್ವಲ್ಪಭಾಗ ದೊರೆಯುತ್ತದೆಂದು ಈ ಸಂದರ್ಭದಲ್ಲಿ ನಾವು ತಿಳಿದುಕೊಳ್ಳುತ್ತೇವೆ.

ಕಡೆಯದಾಗಿ ತಮ್ಮ ಹತ್ತಿರ ವಿನಂತಿ ಮಾಡುವುದು ನಮ್ಮ ದೇಶದ ಜನರು ಆರ್ಥಿಕಮುಗ್ಗಟ್ಟಿನಿಂದ ನರಳುತ್ತಿರುವಾಗ ನಿತ್ಯ ಉಪಯೋಗದ ವಸ್ತುಗಳ ಮೇಲೆ ಈ ತೆರಿಗೆ ಭಾರವನ್ನು ಹೆಚ್ಚಾಗಿ ಹಾಕಿ ಜನರನ್ನು ದುರ್ಗತಿಗೆ ಇಳಿಸಿದರೆ ಖಂಡಿತವಾಗಿಯೂ ಜನರು ಒಂದು ಕ್ರಾಂತಿಯನ್ನೆಬ್ಬಿಸಿ ನಿಮಗೆ ಬುದ್ಧಿ ಕಲಿಸುತ್ತಾರೆ. ಆದುದರಿಂದ ಈ ಸಂದರ್ಭವನ್ನು ನೀವು ಉಪಯೋಗಿಸಿಕೊಂಡು ಜನರಿಗೆ ತೊಂದರೆ ಕೊಡಬಾರದು ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಕಲ್ಲೂರು ಉರುಫ್ ವಾಲಿ ಚೆನ್ನಪ್ಪ ಶಂಕರಪ್ಪ (ಸಂಪಗಾಂವ್-೧).—ಅಧ್ಯಕ್ಷರೇ, ಈ ಮಾರಾಟ ತೆರಿಗೆಯನ್ನು ಹಾಕಬೇಕೆಂದು ಏನೊಂದು ಮಸೂದೆ ತಂದಿದ್ದಾರೆ ಅದನ್ನು ನಾನು ಅನುಮೋದಿಸುತ್ತಾ ಎರಡು ಮಾತುಗಳನ್ನಾಡಬೇಕೆಂದಿದ್ದೇನೆ. ಮಾರಾಟ ತೆರಿಗೆಯು ಒಂದೊಂದು ರಾಜ್ಯದಲ್ಲಿ ಒಂದೊಂದು ರೀತಿಯಿಂದ ವಿಧಿಸಲ್ಪಡುತ್ತಿದೆ ಎಂದು ನಮ್ಮ ಮಿತ್ರರು ಹೇಳಿದರು. ಒಂದೊಂದು ಕಡೆ ಒಂದೊಂದು ರೀತಿ ಇದೆ, ಅದನ್ನೆಲ್ಲಾ ನೋಡಿಕೊಂಡು ಹಾಕುವುದು ಒಳ್ಳೆಯದು ಎಂದು ಹೇಳಬೇಕಾಗಿದೆ. ನಿಪ್ಪಾಣಿಯಿಂದ ಎರಡು ಮೈಲಿಗಳ ದೂರದಲ್ಲಿ ಮುಂಬಯಿ ರಾಜ್ಯವಿದೆ. ಬೊಂಬಾಯಿ ಪ್ರಾಂತದಲ್ಲಿ ಅಕ್ಕಿಯ ಮೇಲೆ ಜಾಸ್ತಿಯಾಗಿ ಮತ್ತು ಎಣ್ಣೆಯಮೇಲೆ ಕಡಮೆಯಾಗಿ ತೆರಿಗೆ ಹಾಕಿದ್ದಾರೆ. ಅದೇ ನಮ್ಮಲ್ಲಿ ಎಣ್ಣೆಗೆ ಜಾಸ್ತಿ ತೆರಿಗೆ ಮತ್ತು ಅಕ್ಕಿಗೆ ತೆರಿಗೆಯಿಲ್ಲ. ಆದುದರಿಂದ ಕಳ್ಳಸಾಗಾಣಿಕೆಯಲ್ಲಿ ಬೊಂಬಾಯಿನಿಂದ ಬೆಂಗಳೂರಿಗೆ ಎಣ್ಣೆ ಬರುತ್ತಿದೆ ಮತ್ತು ಮೈಸೂರು ದೇಶದಿಂದ ಅಕ್ಕಿ ಬೊಂಬಾಯಿಗೆ ಹೋಗುತ್ತಿದೆ. ಇಲ್ಲಿ ಧಾರಣೆ ಕಡಮೆಯಾಗಿರುವುದು ಹೊರಕ್ಕೂ, ಹೊರಗೆ ಕಡಮೆ ಧಾರಣೆಯಿರುವುದು ನಮ್ಮಲ್ಲಿಗೂ ಹೋಗಿ ಬರುವುದಕ್ಕೆ ಅವಕಾಶವಾಗಿದೆ. ಆದುದರಿಂದ ಅನ್ಯ ರಾಜ್ಯಗಳಲ್ಲಿರುವ ಹಾಗೆ ಈ ತೆರಿಗೆಯನ್ನು ಇಲ್ಲಿಯೂ ಹಾಕುವುದು ಒಳ್ಳೆಯದು.

ಇನ್ನು ತೆರಿಗೆ ಹಾಕುವುದು ಅನಿವಾರ್ಯ. ಮದುವೆ ಆಗ ವವರೆಗೆ ಹುಚ್ಚು ಬಿಡುವುದಿಲ್ಲ, ಹುಚ್ಚು ಬಿಡುವವರೆಗೆ ಮದುವೆಯಿಲ್ಲ ಅನ್ನುವಂತೆ ಈಗ ಅನೇಕ ಯೋಜನೆಗಳು ನಡೆಯಬೇಕು. ದೇಶದ ಪ್ರಗತಿಯಾಗಬೇಕಾದರೆ ತೆರಿಗೆ ಹಾಕಬೇಕು. ಹಾಕಿದರೆ ಎಲ್ಲರಿಗೂ ಬೀಳುತ್ತದೆ. ಸಿನೀಮಾ ಗೃಹಗಳು ಬೇಕಾದಷ್ಟಿವೆ, ಈ ದಿನ ಒಂದು ಅಂಗಡಿ ಬಜಾರಿನಲ್ಲಿದ್ದರೆ ಇನ್ನು ಕೆಲವು ದಿನಗಳಲ್ಲಿ ಐದು ಅಂಗಡಿ ಕಾಣಿಸಿಕೊಳ್ಳುತ್ತವೆ. ಹೋಟೇಲುಗಳ ಸಂಖ್ಯೆ ಹೆಚ್ಚುತ್ತಿದೆ. ಸಿನೀಮಾ ಗೃಹಗಳಲ್ಲಿ ಜಾಗವೇ ಸಿಕ್ಕುವಹಾಗಿಲ್ಲ. ಕಾಳಸಂತೆಯಲ್ಲಿ ಟಿಕೆಟ್ ಪಡೆಯುತ್ತಾರೆ. ರೈಲ್ವೆಗಳಲ್ಲಿ, ಬಸ್ಸು ನಿಲ್ದಾಣಗಳಲ್ಲಿ ಜನ ಸಂದಣಿ ಜಾಸ್ತಿ. ಆದರೆ ಬಡತನವಿದೆ, ಬಹಳ ಮಂದಿ ಬಡವರು ನಮ್ಮ ದೇಶದಲ್ಲಿದ್ದಾರೆ, ಅವರನ್ನು ಗಮನಿಸುವುದಿಲ್ಲ ಎಂದು ಮಾತನಾಡುತ್ತಾರೆ. ಇದಕ್ಕೆ ಉತ್ತರ ಹೇಳುವುದು ಕಷ್ಟ. ಈಗ ಒಂದು ಚೀಲ ಜೋಳಕ್ಕೆ 40 ರೂಪಾಯಿಗಳ ಬೆಲೆ ಇದೆ. ಅಕ್ಕಿ ಪಲ್ಲಕ್ಕೆ ನೂರು ರೂಪಾಯಿದೆ. ಈ ಧಾನ್ಯಗಳಮೇಲೆ ತೆರಿಗೆಯಿರಲಿಲ್ಲ. 10-20 ಎಕರೆ ಭೂಮಿಯಿರುವವರು ನಮ್ಮ ಕಡೆ ದೊಡ್ಡ ದೊಡ್ಡ ಮನೆ ಕಟ್ಟಿಕೊಂಡು ಅನುಕೂಲವಾಗಿದ್ದರೆ. ಒಂದೆರಡು ಎಕರೆ ಇರುವವರಿಗೆ ಉತ್ಪತ್ತಿಯೆಲ್ಲಾ ಖರ್ಚಿಗೆ ಬೇಕಾಗುತ್ತದೆ; ಒಟ್ಟಿನಮೇಲೆ ಬಡತನ ಬಹಳವಾಗಿದೆ, ಬಹಳ ಕಷ್ಟವಿದೆ ಎಂದು ಬಹಳವಾಗಿ ಕೂಗಾಡುತ್ತಾರೆ. ಆದರೆ ಮೋಟಾರು ವಾಹನಗಳಲ್ಲಿ ಅಡ್ಡಾಡುವ ಮಂದಿಯನ್ನು ಮತ್ತು ಚಹಾ ಅಂಗಡಿಗಳಲ್ಲಿರುವವರನ್ನು ನೋಡಿದರೆ ನಿಜವಾಗಿಯೂ ಬಡತನವಿದೆಯೋ ಎಂಬ ಅನುಮಾನ ಬರುತ್ತದೆ. ಬಡವರ ಸಂಖ್ಯೆ ಹೆಚ್ಚು, ಅವರಿಗೆ ತೊಂದರೆಯಾಗುತ್ತದೆ ಎಂದು ಎಲ್ಲರೂ ಕೂಗಾಡಿದರೆ ಯಾರಿಂದ ತೆರಿಗೆ ತೆಗೆದುಕೊಳ್ಳಬೇಕು? ಆಹಾರಧಾನ್ಯಗಳಮೇಲೆ ಈ ದಿವಸ ಜಾಸ್ತಿ ತೆರಿಗೆ ಹಾಕಿದರೆ ಅನಾಹುತವಾಗುತ್ತದೆಂದು ಹೇಳುತ್ತಾರೆ. ಕಬ್ಬಿನ ಉದಾಹರಣೆ ತೆಗೆದುಕೊಂಡರೆ ನಮ್ಮ ಕಡೆ ಒಂದು ಎಕರೆ ಕಬ್ಬು ಬೆಳೆಯಲು 600-700 ರೂಪಾಯಿಗಳವರೆಗೆ ಖರ್ಚಿದೆ, ಬರೀ ನೀರಿನ ತೆರಿಗೆ ಒಂದೇ ಎಕರೆಗೆ 280 ರೂಪಾಯಿಗಳು. ಅಷ್ಟೇ ಉಳಿದಕಡೆ 10 ರೂಪಾಯಿದೆ. ನಮಗೆ ಹೆಚ್ಚು ಬೀಳುತ್ತಿದೆ. ಇದನ್ನು ಸುಧಾರಣೆ ಮಾಡಬೇಕು. ಇದನ್ನೆಲ್ಲಾ ಆಲೋಚಿಸಬೇಕು. ಈಗ ಹಳ್ಳಿಗಳ ಕಡೆ ನೋಡಿದರೆ ಕೆಲವು ಹಳ್ಳಿಗಳು ಹಾಳಾಗಿವೆ.

4–00 P. M.

ಹಳ್ಳಿಗಳು ಹಾಳಾಗುವುದಕ್ಕೆ ಕಾರಣವೇನೆಂದರೆ, ಅಲ್ಲಿನ ಕೆಲವು ಜನ ತಮ್ಮ ಭೂಮಿ ಮನೆಗಳನ್ನು ಮಾರಾಟಮಾಡಿ ವ್ಯಾಪಾರಸ್ಥರಾಗಿ ಪಟ್ಟಣಗಳಿಗೆ ಬಂದು ಇಲ್ಲಿ ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿ ದಂಡಿಯಾಗಿ ಸಂಪಾದನೆಮಾಡುತ್ತಿದ್ದಾರೆ. ಇವರ ಮೇಲೆ ಹೆಚ್ಚಿನ ಕರ ಹಾಕಿ. ಪಾನನಿರೋಧವನ್ನು ತೆಗೆದು ಹಾಕಿ ಎಂದು ಕೆಲವರು ಹೇಳಿದರು. ಆದರೆ ಹಾಗೆ ಮಾಡುವುದು ನೀತಿಗೆ ಒಳ್ಳೆಯದಲ್ಲ. ಪಾನನಿರೋಧವನ್ನು, ಬಹಳ ದಿವಸಗಳಿಂದ ಅಂಗೀಕರಿಸಿದ ತತ್ತ್ವವೆಂದು ದೇಶದಲ್ಲಿಟ್ಟುಕೊಂಡುಬಂದಿದ್ದೇವೆ. ಹದಿನಾರು ಕೋಟಿ ರೂಪಾಯಿ ಉತ್ಪತ್ತಿ ಬರುತ್ತಿತ್ತು, ಅದು ಒಂಭತ್ತೂವರೆಕೋಟಿ ರೂಪಾಯಿ ಆಗಿ, ಈ ಹೊತ್ತು ನಾಲ್ಕು ನಾಲ್ಕೂವರೆ ಕೋಟಿ ಇದೆ. ಕುಡಿಯುವವರು ಜಾಸ್ತಿ ಇದ್ದರೆ ಅವರಿಗೆ ಲೈಸೆನ್ಸ್ ಕೊಡಬಹುದು. ಬ್ಲ್ಯಾಕ್‌ಮಾರ್ಕೆಟ್‌ನಲ್ಲಿ ಮಾದಕ ಪದಾರ್ಥ ಮಾರಲು ಏಕೆ ಅವಕಾಶಕೊಡಬೇಕು? ಲೈಸೆನ್ಸ್ ತೆಗೆದುಕೊಂಡು ಕುಡಿಯುವವರು ಕುಡಿಯಲಿ. ಒಟ್ಟಿನಲ್ಲಿ, ಪಾನನಿರೋಧ ಒಂದು ನೀತಿ, ತತ್ತ್ವ ಎಂದಿಟ್ಟುಕೊಂಡಿರುವುದರಿಂದ ಅದನ್ನು ಬಿಡುವಹಾಗಿಲ್ಲ. ನೀರಾ ಕೇಂದ್ರಗಳನ್ನು ಬಂದ್ ಮಾಡಬೇಕೆಂದು ಎಷ್ಟೋ ಸಲ ಹೇಳಿದ್ದೇವೆ.........

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಹಾಗಿದ್ದರೆ ತಮ್ಮ ಅಭಿಪ್ರಾಯ ಹೆಂಡ ಕುಡಿಯುವುದು ತಪ್ಪೆಂದು ಹೇಳಿ ಅದನ್ನು ತೆಗೆದು ಹಾಕಬೇಕೆಂದು ಹೇಳುವವರು ನೀತಿಗೆ ವಿರೋಧವಾಗಿ ಮಾತಾಡುತ್ತಾರೆ! ಲೈಸೆನ್ಸ್ ತೆಗೆದುಕೊಂಡು ಹೆಂಡ ಕುಡಿಯಬಹುದೆಂದು ಹೇಳುವುದು ನೀತಿಗೆ ವಿರೋಧವಲ್ಲವೇ?

ಶ್ರೀ ಕಲ್ಲೂರು ಉರುಫ್ ವಾಲಿ ಚೆನ್ನಪ್ಪ ಶಂಕರಪ್ಪ.—ಪಾನನಿರೋಧ ತೆಗೆದುಹಾಕಿ, ಜನ ಸೆರೆ ಕುಡಿದು, ಅವರ ಮಕ್ಕಳೆಲ್ಲ ಹಾಳಾಗ ಬೇಕೆಂದು ಹೇಳುತ್ತೀರಿ. ಸೆರೆ ಅಂಗಡಿಗಳನ್ನು ತೆರೆಯಿರಿ ಎಂದು ಹೇಳುವುದು ಒಳ್ಳೆಯದಲ್ಲ, ಪಾನನಿರೋಧ ಒಂದು ಒಳ್ಳೆಯ ತತ್ತ್ವ ಎಂದು ಹೇಳಿದ್ದೇನೆ. ಕೆಲವರಿಗೆ

(ಶ್ರೀ ಕಲ್ಲೂರು ಉರುಫ್ ವಾಲಿ ಚೆನ್ನಪ್ಪ ಶಂಕರಪ್ಪ)

ಕುಡಿಯುವುದರಲ್ಲಿ ಬಹಳ ಅಕ್ಕರೆಯಿದ್ದರೆ ನಾನು ಹೇಳಿದ ಹಾಗೆ ಮಾಡಿ ಎಂದು ಹೇಳಿದೆ.

ಮಾರಾಟ ತೆರಿಗೆಯನ್ನು ಮನೆಗಳಮೇಲೆ ಹಾಕಲಿ. ಇತರ ಪದಾರ್ಥಗಳ ಮೇಲೆ ಹಾಕಲಿ. ಆದರೆ ಆಹಾರ ಪದಾರ್ಥಗಳ ಮೇಲೆ ಹಾಕಿದರೆ ಕಷ್ಟ. ಎಷ್ಟೋ ಜನರು ಹಾಹಾಕಾರ ಮಾಡುತ್ತಾರೆ. ಆ ಧಾನ್ಯ ಗಳನ್ನು ಬಿಟ್ಟು ಬೇರೆಪದಾರ್ಥಗಳಮೇಲೆ ತೆರಿಗೆಗಳನ್ನು ಹಾಕಲಿ. ಆದರೆ ತೆರಿಗೆಗಳನ್ನೇ ಹಾಕದೆ ಯೋಜನೆ ಗಳನ್ನು ಯಶಸ್ವಿಯಾಗಿ ಮಾಡಲು ಬೇರೆ ಮಾರ್ಗವಿಲ್ಲ ವೆಂದು ಹೇಳುತ್ತೇನೆ

Sri B. P. KADAM (Karwar).—Mr. Speaker, when I just wrote a note, I only wanted to make a claim. I will be grateful if the time is extended to ten minutes.

The Sales Tax Bill (Second Amendment) is on the anvil of this House and there has been a considerable discussion on it for a long time. It shall be my endeavour not to repeat the arguments which have already been advanced. In doing so, I assure you that I shall be very brief.

Certain items which were left earlier have been deliberately listed in the present Bill. An effort has been made to see that all items or things which are of vital and necessity to the common man and for people in all walks of life, have been prop sed to be taxed. A case has been made that so much money is necessary for the implementation of the Third Plan and Government have tried to take shelter under the Resources and Economy Committee report, for their action. Unfortunately that report has not been discussed in this Assembly. As a matter of fact that report ought to have been discussed first in this House, which is the sovereign body. It is said that the report has been discussed in the other House. As a matter of fact it was the sacred duty of the Government to see that, that report was discussed first here and all the suggestions of the Hon'ble Members ought to have been carefully noted down by the Government with due care and respect. Unfortunately that amount of respect has not been shown. Simply because there have been certain suggestions; it should not be binding upon the Government to accept them. It will not be proper for the Government to take shelter under that report. There are so many suggestions, good and bad, and it is not proper on the part of the Government to single out a few and take shelter under that report.

Mr. SPEAKRE.—That report will be coming up for discussion here, tomorrow.

Sri B. P. KADAM.—I have already seen the Agenda. With that much of introduction and hoping that the report would come up before us very soon for discussion, I would like to make a few references here.

Vital commodities, which are necessary to the public, like vegetables, firewood, etc, have been proposed to be taxed. It has been proposed to tax firewood which was deleted on earlier occasions. It is a very unkind gesture on the part of the Government if firewood is taxed. If that is done, people will take to burning cowdung and that would affect the agricultural production. As a matter of fact every agricultural report, right from the Royal Commission report, has said that attempts should be made to see that people are prohibited from burning cow dung. If firewood is taxed, the common man will take to burning of cow dung because it would be difficult for him to buy firewood.

The other aspects have been touched by all the members who have so far spoken. I would not like to take much time of the House and I would like to appeal to the Government to see that firewood is exempted. Secondly, I urge upon the Government to see that poorer sections of the business community are not taxed. As in the State of Bombay, the people who have a turnover of more then Rs. 25,000 only may be taxed. If a merchant whose turnover is only Rs. 7,500 is taxed, it will be difficult for him to keep accounts.

I will not take much time of the House and I will close my speech.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಸ್ವಾಮಿ, ಈಗ ಮಾರಾಟದ ತೆರಿಗೆಯ ಮಸೂದೆ ನಮ್ಮ ಮುಂದೆ ಇಟ್ಟಿರುವಂಥಹುದನ್ನು ಸಮರ್ಥನೆ ಮಾಡುತ್ತಾ ಕೆಲವು ಸಲಹೆಗಳನ್ನು ನಾನು ಕೊಡುತ್ತೇನೆ.

ಇಡೀ ದೇಶದಲ್ಲಿ ಮನುಷ್ಯನಿಗೆ ಆಹಾರದ ವಿಷಯ ಬಹಳ ಪ್ರಾಮುಖ್ಯವಾದದ್ದು. ಪ್ರತಿನಿತ್ಯ ಬಳಸತಕ್ಕ

ಆಹಾರ ಪದಾರ್ಥದ ಮೇಲೆ ತೆರಿಗೆಯನ್ನು ವಿಧಿಸುವುದು ಅಷ್ಟು ಸರಿಯಲ್ಲ. ವ್ಯವಸಾಯಗಾರ ಇಂದು ಎಷ್ಟು ದುಡಿಯುತ್ತಿದ್ದಾನೋ, ಅವನು ಪಡುತ್ತಿರತಕ್ಕ ಕಷ್ಟಕ್ಕೆ ಸರಿಯಾದ ಪ್ರತಿಫಲವನ್ನು ತೆಗೆದುಕೊಂಡು ಮನೆಗೆ ಬರುವುದಕ್ಕೂ ಸಾಧ್ಯವಿಲ್ಲದ ಪರಿಸ್ಥಿತಿಯಿದೆ. ಒಂದು ತರೀ ಭೂಮಿಯಲ್ಲಿ ಎಕರೆಗೆ ಎಷ್ಟು ಉತ್ಪನ್ನವಾಗುತ್ತದೆ, ಎಷ್ಟು ಖರ್ಚಾಗುತ್ತದೆಂಬುದನ್ನು ಈ ಸಭೆ ಸ್ವಲ್ಪ ಪರಾಂಬರಿಸಬೇಕು. ನಾನು ಇದೇ ಒಂದು ಕಸಬನ್ನು ಅವಲಂಬಿಸಿದವನಾಗಿ ಇದನ್ನು ಹೇಳುತ್ತಿದ್ದೇನೆ. ಇದರ ಪ್ರಕಾರ ಒಂದು ಎಕರೆಯಲ್ಲಿ ಸರಾಸರಿ 12 ಪಲ್ಲಾ ಬೆಳೆದು 360 ರೂಪಾಯಿ ಸಂಪಾದನೆಯಾದರೆ, ಉಳುಮೆ ಮುಂತಾದ ಎಲ್ಲಾ ಖರ್ಚುಗಳೂ ಸೇರಿ 376 ರೂಪಾಯಿಗಳು ವ್ಯಯವಾಗಿರುತ್ತವೆ. ಹೇಗೆ ಎಂದು ತಾವು ಕೇಳಬಹುದು. ನಾನು ಪ್ರತಿಯೊಂದು ಖರ್ಚಿನ ಬಾಬನ್ನೂ ವಿವರವಾಗಿ ಕೊಡಬಲ್ಲೆ. ಉಕ್ಕಿಗೆ 4 ಬೇಸಾಯ, ಮೊದಲನೆ ಸಾರಿಗೆ 20 ರೂಪಾಯಿ ; ಎರಡನೆಯ ಸಾರಿ ಉಕ್ಕಿಗೆ— ಮೂರು ಬೇಸಾಯ 15 ರೂಪಾಯಿ ; ಹರಗಲು, ಕೊಳ್ಳು ಹೊಡೆಯಲು—10 ರೂಪಾಯಿ ; ಗೊಬ್ಬರ, ಗಾಡಿಗೆ 5 ರೂಪಾಯಿನಂತೆ 10 ಗಾಡಿಗೆ 50 ರೂಪಾಯಿ ; ಗೊಬ್ಬರ ಹೇರುವುದು 10 ರೂಪಾಯಿ; ಗೊಬ್ಬರ ಶೇಖರಿಸುವುದಕ್ಕೆ, ಎರಡು ಆಳುಗಳಿಗೆ—3 ರೂಪಾಯಿ; ಗುದ್ದಲಿ ಕೆಲಸಕ್ಕೆ— 4 ರೂಪಾಯಿ, ಬಿತ್ತಿಗೆ ಮಾಡಲು, 2 ಬೇಸಾಯ 10 ರೂಪಾಯಿಯಂತೆ ಕುಂಟೆ ಮುಂತಾದವುಗಳನ್ನು ಹೊಡೆಯುವುದಕ್ಕೆ 21 ರೂಪಾಯಿ ; ಅರವಸೇ ನೀರು ಕುಂಟೆಗೆ 15 ರೂಪಾಯಿ ; ಕಳೆ ವಗ್ಗೈರೆಗೆ—37½ ರೂಪಾಯಿ; ನೀರು ವಗ್ಗೈರೆ ನೋಡಿಕೊಳ್ಳುವುದಕ್ಕೆ 10 ರೂಪಾಯಿ; ಬತ್ತ ಕೊಯ್ಯಲು 18 ರೂಪಾಯಿ; ಅದನ್ನು ಕಟ್ಟುವುದಕ್ಕೆ 6 ರೂಪಾಯಿ, ಭತ್ತ ಬಡಿಯುವುದಕ್ಕೆ 17½ ರೂಪಾಯಿ, ಕೂರುವುದಕ್ಕೆ 3-12-0 ರೂಪಾಯಿ; ಹುಲ್ಲು ತುಳಿಸುವುದಕ್ಕೆ 20 ರೂಪಾಯಿ; ಹುಲ್ಲು ಹೇರಲು 15 ರೂಪಾಯಿ; ಭತ್ತ ಮನೆಗೆ ಹೇರಲು 6 ರ ಪಾಯಿ. ಬೀಜದ ಭತ್ತ 15 ರೂಪಾಯಿ, ಸರ್ಕಾರಿ ಗೊಬ್ಬರ (Fertilizers) 50 ರೂಪಾಯಿ. ವಾಟರ್ ರೇಟು ಕಂದಾಯ 20 ರೂಪಾಯಿ, ಒಟ್ಟು ಇದರ ಮೇಲೆ ಚಿಲ್ಲರೆ ಖರ್ಚುಗಳು ಎಲ್ಲಾ ಸೇರಿದರೆ 376-12-0 ರೂಪಾಯಿಗಳಾಗುತ್ತವೆ. ಬರುವ ಉತ್ಪತ್ತಿ 360 ರೂಪಾಯಿ, ಸರಾಸರಿ 12 ಪಲ್ಲ ಬೆಳೆದರೆ ಪಲ್ಲಾ ಒಂದಕ್ಕೆ 30 ರೂಪಾಯಿನಂತೆ ಮಾರಿದರೆ 360 ರೂಪಾಯಿಯಾಗುತ್ತದೆ. ಅಲ್ಲಿಗೆ ಹುಲ್ಲನ್ನು ಅದೂ ಸತ್ತಹುಲ್ಲನ್ನು ಮಾರುವುದರಿಂದ 30 ರೂಪಾಯಿ ಬಂದರೆ ಅವನಿಗೆ 14-12-0 ರೂಪಾಯಿ ಉಳಿಯುತ್ತದೆ. ಈ ಖರ್ಚುಗಳೆಲ್ಲದರ ಮೇಲೆ ಕಂಟ್ರಿಬ್ಯೂಷನ್ ಬೇರೆ ಬಿದ್ದರೆ ಅದೂ ಇಲ್ಲದೆ ಹೋಗುತ್ತದೆ. ರೈತನ ಕಷ್ಟ ಹೇಳತೀರದು. ಎಷ್ಟೋ ವೇಳೆ ಕಂದಾಯ ಕೊಡುವುದಕ್ಕಿಲ್ಲದೆ ಮನೆಯಲ್ಲಿ ಹೆಂಡತಿಯ ಮಾಂಗಲ್ಯವನ್ನು ಕೂಡ ಮಾರಿ ಕೊಡಬೇಕಾದ ಸಂದರ್ಭವಿರುತ್ತದೆ. ಮನೆ ಮಕ್ಕಳೆಲ್ಲಾ ಹಗಲು ರಾತ್ರಿ ದುಡಿದರೂ ಒಂದೂ ಲಾಭವಿರುವುದಿಲ್ಲ. ನೀರಾವರಿ ಅನುಕೂಲವಿರುವ ಕಡೆಗಳಲ್ಲೇ ಈ ಪಾಡಾದರೆ ಇನ್ನು ಯಾವ ನೀರಾವರಿ ಆಸರೆಯೂ ಇಲ್ಲದೇ ಮಳೆಯನ್ನೇ ನೆಚ್ಚಿಕೊಂಡಿರುವ ಜನರ ಗತಿಯೇನು ? ನಮ್ಮ ಕಡೆಯಲ್ಲಿ ಒಂದು ಎಕರೆ ಹೊಲದಲ್ಲಿ ಎರಡು ಪಲ್ಲ ರಾಗಿ ಕೂಡ ಆಗುವುದಿಲ್ಲ; ಆದ್ದರಿಂದ ತಾವು ಹೀಗೆ ಕಷ್ಟ ಪರಿಸ್ಥಿತಿಯಲ್ಲಿರುವ ರೈತನು ತಿನ್ನತಕ್ಕ ಆಹಾರ ಧಾನ್ಯಗಳ ಮೇಲೆ ಯಾವ ರೀತಿ ಟ್ಯಾಕ್ಸ್ ಹಾಕುವುದು ನ್ಯಾಯವೋ ಗೊತ್ತಿಲ್ಲ. ಈಗ ನಾನು ಹೇಳಿರತಕ್ಕ ಅಂಕಿ ಅಂಶಗಳನ್ನು ತಾವು ಒಪ್ಪಿಕೊಳ್ಳುವುದಕ್ಕಾಗದಿದ್ದರೆ ಒಂದು ಎಕರೆ ಭೂಮಿಯನ್ನು ಸರ್ಕಾರದವರೇ ಇದೇ ಬೆಂಗಳೂರು ಪಟ್ಟಣದಲ್ಲಿ ಸಾಗುವಳಿ ಮಾಡಿಸಿ ನೋಡಲಿ. ಎಷ್ಟು ಖರ್ಚಾಗುತ್ತದೆಂಬುದನ್ನು ಪರೀಕ್ಷೆ ಮಾಡಲಿ. ಆಗಲಾದರೂ ತಮಗೆ ಮನವರಿಕೆಯಾಗುತ್ತದೆ. ಈ ದೆಶೆಯಿರುವುದರಿಂದಲೇ ಈ ಹೊತ್ತಿಗೂ ಭೂಮಿಯನ್ನೇ ಅಂಟಿಕೊಂಡು ಬೇಸಾಯ ಮಾಡಿ ಜೀವನ ಹೊರೆಯುತ್ತಿರುವ ಯಾವ ರೈತನೂ ಕೂಡ ಸರಿಯಾದ ಒಂದು ಮನೆ ಕಟ್ಟಿಕೊಂಡಿಲ್ಲ. ಎಲ್ಲಿಯೋ ಒಬ್ಬಿಬ್ಬರು ಪ್ಲಾಂಟೇಷನ್ ಇಟ್ಟಿರುವವರು ದೊಡ್ಡವರಾಗಿರಬಹುದು. ಬೇರೆ Business ಮಾಡುತ್ತಿರುವವನು ಮನೆ ಚೆನ್ನಾಗಿ ಕಟ್ಟಿಕೊಂಡಿರಬಹುದು. ಆದ್ದರಿಂದ ಆಹಾರ ಧಾನ್ಯಗಳ ಮೇಲೆ ಯಾವ ತೆರಿಗೆಯನ್ನೂ ಕೂಡ ಹಾಕದೆ ಇದನ್ನು ಕೈಬಿಡಬೇಕೆಂದು ನಾನು ಹೇಳುತ್ತೇನೆ. ಈ ಹೊತ್ತು ದೇಶದ ಬೆನ್ನುಮೂಳೆಯಾದ ರೈತನಿಂದಲೇ ದೇಶ ಉದ್ಧಾರವಾಗಬೇಕೆಂದು ಉಭಯತರೂ ಹೇಳುವಾಗ, ತಾವು ಆ ಬೆನ್ನುಮೂಳೆಯನ್ನೇ ಕತ್ತರಿಸಿಕೊಂಡು ತಿನ್ನುವುದಕ್ಕೆ ಪ್ರಯತ್ನಿಸುವುದು ಸರಿಯಲ್ಲ.

ಶ್ರೀ ಜಿ. ವಿ. ಗೌಡ.—ಅಂದರೆ ರೈತನ ಮೇಲೆ ಯಾವ ತೆರಿಗೆಯನ್ನೂ ಹಾಕುವುದು ಬೇಡವೇ ?

ಶ್ರೀ ಟಿ.ಡಿ. ದೇವೇಂದ್ರಪ್ಪ.—ಹೌದು. ಈ ಹೊತ್ತು ರೈತ ಮಿಕ್ಕ ಜನರಂತೆ ಸಂಘ ಸಂಸ್ಥೆಗಳನ್ನು ಕಟ್ಟಿಕೊಳ್ಳುವುದನ್ನು ಕಂಡಿಲ್ಲ. ಯಾರೂ ದಂಡು ದಿವಾಣ ಕಟ್ಟಿಕೊಂಡು ಪ್ರದರ್ಶನ ಮಾಡುವ ರೀತಿ ಅರಿತಿಲ್ಲ. ಪ್ರಾಮಾಣಿಕತೆಯಿಂದ ಒಂದೇ ಸಮನೆ ದುಡಿದು ನಿಮ್ಮ ಹೊಟ್ಟೆಗೆ ಅನ್ನ ತಂದುಕೊಡುವ ಒಂದೇ ಒಂದು ನೀತಿ ಅವನದು. ನೀವು ಏನೇ ಮಾಡಿದರ ನಿಮಗೆ ಅನ್ನ ತಂದು ಕೊಡುತ್ತಾನೆ. ನಿಮ್ಮ ತಂಟೆಗೆ ಬರುವುದಿಲ್ಲ. ಧರ್ಮರಾಯನ ಸಮಾನ ರೈತ ಎಂದರೆ ತಪ್ಪಲ್ಲ. ಹೀಗಿರುವಾಗ ಆ ನಿರಪರಾಧಿ ರೈತನ ಮೇಲೆ ಯಾವ ಹೊರೆಯನ್ನು ಹೇರುವುದೂ ತರವಲ್ಲ. ತಾವು ಆ ಪ್ರಯತ್ನ ಮಾಡಿದಲ್ಲಿ ಒಂದಲ್ಲ ಒಂದು ದಿವಸ ದೇಶದಲ್ಲಿ ಕ್ರಾಂತಿಯಾಗಬಹುದು.

An. HON'BLE MEMBER.—Sri Devendrappa will take the lead.

ಶ್ರೀ ಟಿ. ಡಿ. ದೇವೇಂದ್ರಪ್ಪ.—ರೈತರು ಯಾವಾಗ ಆ ರೀತಿ ಕ್ರಾಂತಿಯೆಬ್ಬಿಸುತ್ತಾನೋ ಅಂದು ನಾನಾಗಲೀ, ನೀವಾಗಲೀ, ಉಳಿಯಲಿಕ್ಕಿಲ್ಲ.

Mr. SPEAKER.—I have no doubt that I will survive.

ಶ್ರೀ ಟಿ. ಡಿ. ದೇವೇಂದ್ರಪ್ಪ.—ರೈತರು ಎಷ್ಟೋ ಸಂದರ್ಭಗಳಲ್ಲಿ ಕಂದಾಯ ಕೊಡುವುದಕ್ಕೂ ರಾಹವಿಲ್ಲದೆ, ಹೆಂಡತಿ ಮಕ್ಕಳನ್ನೂ ಸಂಬಳಕ್ಕಿಟ್ಟು ಹೆಂಡತಿಯ ಮಾಂಗಲ್ಯವನ್ನು ಮಾರಿ ಕಂದಾಯ ಕೊಟ್ಟಿರುವ ನಿದರ್ಶನಗಳಿವೆ. ಆದ್ದರಿಂದ ಇಂಥ ಬಡ ರೈತರ ಮೇಲೆ ಹೊರೆಯಾಗುವ ಆಹಾರ ಧಾನ್ಯಗಳ ಮೇಲೆ ಯಾವ ತೆರಿಗೆಯನ್ನೂ ಹಾಕಕೂಡದೆಂದು ಸಭಾಪತಿಯವರ ಮೂಲಕ ನಾನು ಸರ್ಕಾರದವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

† ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಅಧ್ಯಕ್ಷರೇ, ಪ್ರಜಾಪ್ರಭುತ್ವ ಬರುವುದಕ್ಕೆ ಮುಂಚೆ ಮೈಸೂರು ದೇಶ ಇದ್ದುದಕ್ಕಿಂತಲೂ ಈಗ ಮೈಸೂರು ವಿಶಾಲವಾಗಿದೆಯೆಂದು ಪಾಶ್ಚಿಮಾತ್ಯ ದೇಶದವರೇ ಅಲ್ಲದೆ ಇತರ ದೇಶಗಳವರೆಲ್ಲರೂ ಹೇಳುತ್ತಿದ್ದಾರೆ. ಇದು ಬಹಳ ಒಳ್ಳೆಯ ಹೆಸರನ್ನು ಪಡೆ

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ಯುತ್ತಾ ಬಂದಿದ್ದರೂ ಈಗ ಪ್ರತಿಯೊಂದಕ್ಕೂ ನಮ್ಮ ಅಕ್ಕಪಕ್ಕದ ಪ್ರಾಂತಗಳಾದ ಕೇರಳ, ಮದ್ರಾಸ್ ಮತ್ತು ಆಂಧ್ರ ಇವರನ್ನು ಕೇಳೋಣ. ಅಲ್ಲಿಯವರು ಏನು ಮಾಡಿದ್ದಾರೋ ಅದನ್ನೇ ಕಾಪಿ ಮಾಡಿಕೊಂಡು ಹೋಗತಕ್ಕ ಒಂದು ಪಾಲಿಸಿಯನ್ನು ಈ ಸರ್ಕಾರದವರು ಅನುಸರಿಸುತ್ತಿದ್ದಾರೆ. ಇದರಿಂದೇನೂ ಪ್ರಯೋಜನವಿಲ್ಲ. ಇಂಗ್ಲಿಷ್‌ನವರು ಅಧಿಕಾರ ಬಿಟ್ಟು ಕೊಟ್ಟ ಮೇಲೆ ಅವರು ಹೇಳಿದ ಹಾಗೆ ಇವರು ಒಂದೊಂದಕ್ಕೂ ತ್ಯಾಪೆ ಹಾಕಿಕೊಂಡು ದೇಶೋದ್ಧಾರಕ್ಕಾಗಿ ಮತ್ತು ಕಾಂಗ್ರೆಸ್ ಸರ್ಕಾರದ ಅಂತ್ಯಕ್ಕಾಗಿ ಈ ರೀತಿ ಮಸೂದೆಗಳನ್ನು ತರುತ್ತಿದ್ದಾರೆಂದು ನನಗೆ ಕಾಣುತ್ತದೆ. ಇಂತಹ ಮಸೂದೆಗಳನ್ನು ತರಬೇಕಾದರೆ ಚುನಾವಣೆಗೆ ಮುಂಚಿತವಾಗಿಯೇ ಅದರಲ್ಲೂ ಈ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವುದಕ್ಕಿಂತ ಮುಂಚೆಯೇ ಜನಗಳಿಗೆ ಇಂತಿಂಥ ತೆರಿಗೆಗಳನ್ನು ತರುತ್ತೇವೆಂಬುದಾಗಿ ಘೋಷಣೆ ಮಾಡಿದ್ದರೆ ಬಹಳ ಚೆನ್ನಾಗಿತ್ತು. ಯಾವುದೇ ಸರ್ಕಾರ ಅಧಿಕಾರಕ್ಕೆ ಬರಲಿ. ತಮ್ಮ ಅವಧಿಯ 5 ವರ್ಷಗಳಲ್ಲಿ ಇಂತಿಂಥ ತೆರಿಗೆಗಳನ್ನು ಜನಗಳ ಮೇಲೆ ಹೇರಬೇಕಾಗುತ್ತದೆಂಬುದನ್ನು ಮೊದಲೇ ನಿರ್ಧಾರ ಮಾಡಿ ಘೋಷಣೆ ಮಾಡುವುದು ಸರಿಯಾದುದು. ಆದರೆ ಇವರು ಆ ರೀತಿ ಮಾಡಲಿಲ್ಲ. ಶ್ರೀಮಾನ್ ಭಾಸ್ಕರ ಶೆಟ್ಟಿಯವರು ಹೇಳಿದ ಹಾಗೆ ಅಧಿಕಾರಕ್ಕೆ ಬಂದ ಕೂಡಲೆ ಎಲ್ಲವನ್ನೂ ಮರೆತು ಕೇವಲ ನಾಲ್ಕು ವರ್ಷಗಳಲ್ಲಿ ಅಧಿಕಾರ ವಂಚನೆಮಾಡಿ ತೆರಿಗೆಗಳನ್ನು ಇಷ್ಟ ಬಂದಂತೆ ಜನಗಳ ಮೇಲೆ ಹೇರುತ್ತಿದ್ದಾರೆ. ಈ ತೆರಿಗೆ ಹಾಕುವುದನ್ನು ಡೈರೆಕ್ಟಾಗಿ ತಂದಿಲ್ಲ. ಇನ್‌ಡೈರೆಕ್ಟಾಗಿ ತಂದಿದ್ದಾರೆ. ಇವರನ್ನು ಒಂದು ರೀತಿಯಲ್ಲಿ ಕಳ್ಳರು ಎಂದು ಕರೆದರೂ ಏನೂ ಅನುಮಾನವಿಲ್ಲವೆಂದು ನಾನು ಹೇಳುತ್ತೇನೆ. ನಿತ್ಯ ಬಳಕೆಯಲ್ಲಿರುವ ಅದರಲ್ಲೂ ಸಾಮಾನ್ಯ ಮನುಷ್ಯನ ಜೀವನಕ್ಕೆ ಅತ್ಯಗತ್ಯವಾಗಿರತಕ್ಕ ಆಹಾರ ಪದಾರ್ಥಗಳ ಮೇಲೆ ಇವರು ತೆರಿಗೆಯನ್ನು ಹಾಕುತ್ತಿದ್ದಾರೆ. ಅವಿದ್ಯಾವಂತರು ಶೇ. 80ರಷ್ಟು ಇರುವಂತಹ ಕಡೆಗಳಲ್ಲಿ ಈ ರೀತಿ ಸರ್ಕಾರವೇ ಅವರಿಗೆ ಮೋಸ ಮಾಡುವುದಕ್ಕೆ ಹೋಗಬಾರದು. ಗಾಂಧಿತತ್ವವನ್ನು ಪಾಲಿಸುತ್ತೇವೆಂದು ಬಾಯಲ್ಲಿ ಹೇಳುವುದು, ಆದರೆ ಅಧಿಕಾರಕ್ಕೆ ಯಾವಾಗಲೂ ಅಂಟಿಕೊಂಡೇ ಇರಬೇಕೆಂಬ ಒಂದು ಆಸೆಯನ್ನು ತೋರಿಸಿಕೊಂಡು ತಮ್ಮ ಮನಬಂದಂತೆ ತೆರಿಗೆಗಳನ್ನು ಹೆಚ್ಚು ಮಾಡಿಕೊಂಡು ಹೋಗುತ್ತಿರುವುದು. ಇಂತಹ ಕಾನೂನುಗಳು ಬಹಳ ದಿವಸಗಳವರೆಗೆ ಉಳಿಯುತ್ತವೆಂಬ ಭಾವನೆ ನನಗೆ ಖಂಡಿತವಾಗಿಲ್ಲವೆಂದು ನಾನು ಸರ್ಕಾರಕ್ಕೆ ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಅಡಿಗೆ ಮಾಡತಕ್ಕ ಸೌದೆಯಿಂದ ಹಿಡಿದು ಸ್ಮಶಾನದಲ್ಲಿ ಹೆಣ ಸುಡುವ ಸೌದೆಯವರೆಗೂ ಸುಂಕ ಇದೆ. ಇವರು ಸಮತಾ ಸಮಾಜವಾದವನ್ನು ರಚನೆ ಮಾಡುತ್ತೇವೆಂದು ಹೊರಟಿರುವವರು ನಿಜವಾಗಿ ಸಮಾಜವನ್ನು ಕಟ್ಟುತ್ತಾರೆಯೇ ಎಂಬ ಸಂಶಯ ನನಗೆ ಬಂದಿದೆ. ಇವರು ಮಾಡುತ್ತಿರುವುದು ಸಮತಾ ಸಮಾಜವಾದ ರಚನೆಯಲ್ಲ. ಸಮಾಜವ್ಯಾಧಿ ರಚನೆ ಎಂದು ಹೇಳಿದರೆ ಅದೇನೂ ತಪ್ಪಾಗಲಾರದು. ಇದು ಒಂದು ಅಂಟು ಜಾಡ್ಯ. ಪ್ರತಿಯೊಬ್ಬರಿಗೂ ಇವರಲ್ಲಿ ಅಂಟಿಕೊಂಡು ಬರುತ್ತಿದೆ. ಈಗ ಮದ್ರಾಸ್, ಬೊಂಬಾಯಿ, ಆಂಧ್ರ ಪ್ರಾಂತಗಳೂ ಸಹ ಇಲ್ಲವೇ? ಮೈಸೂರು ದೇಶಕ್ಕೆ ಮಾತ್ರ ಹೆಚ್ಚಿಗೆ ತೆರಿಗೆಯನ್ನು ಹಾಕಬೇಕ . ಅದರಿಂದ ಕೆಲವಾರು ಯೋಜನೆಗಳನ್ನು ಕೈಗೊಳ್ಳಬೇಕು, ತೆರಿಗೆ ಹಾಕದೆ ಸರ್ಕಾರ ನಡೆಸುವುದೇ ಕಷ್ಟ—ಈ ರೀತಿ ಹೇಳಿದರೆ ಹೇಗೆ? ಬಾಯಲ್ಲಿ ಹೇಳುವುದು ಒಂದು. ಕಾರ್ಯದಲ್ಲಿ ಮಾಡುವುದು ಒಂದು. ಕಾವಿ ಹಾಕಿದವರೆಲ್ಲರೂ ಸನ್ಯಾಸಿಗಳೇ? ಹಾಗೆಯೇ ಗಾಂಧಿ ಟೋಪಿ ಹಾಕಿದ ಮಂತ್ರಿಗಳೆಲ್ಲರೂ ಕಾಂಗ್ರೆಸ್ ಭಕ್ತರೇ? ಇವರು ವಂಚನೆ ಮಾಡುವ ಜನರೆಂದರೆ ಏನೂ ತಪ್ಪಾಗುವುದಿಲ್ಲ. ಏಕೆಂದರೆ ಯಾರ್ಯಾರಿಗೆ ತೆರಿಗೆಹಾಕಬೇಕು, ಯಾವ್ಯಾವ ಪದಾರ್ಥಗಳ ಮೇಲೆ ತೆರಿಗೆ ಜಾಸ್ತಿ ಮಾಡಬೇಕೆಂಬುದನ್ನು ಮೊದಲು ಇವರು ವಿಚಾರ ಮಾಡಬೇಕು. ಆ ರೀತಿ ಮಾಡದೆ ಎಲ್ಲದಕ್ಕೂ ಒಂದೇ ರೀತಿಯಾಗಿ ತೆರಿಗೆ ಹಾಕುತ್ತಾ ಹೋದರೆ ಜನಗಳಿಗೆ ಬಹಳ ಕಷ್ಟವುಂಟಾಗುತ್ತದೆ. ಒಂದು ಅಂತಸ್ತು ಸಹ ಏನೂ ಇಲ್ಲ. ಸಣ್ಣಪುಟ್ಟ ವ್ಯಾಪಾರಸ್ಥರಿಗೆ ಈ ತೆರಿಗೆಗಳನ್ನು ಹಾಕುವುದನ್ನೇ ವಜಾಮಾಡಿ ಕೋಟ್ಯಾಧೀಶರರು ದೊಡ್ಡ ದೊಡ್ಡ ವ್ಯಾಪಾರಿಗಳ ಮೇಲೆ ಸುಮಾರು 25 ಸಾವಿರ ರೂಪಾಯಿಗಳ ಮೇಲೆ ವ್ಯಾಪಾರ ಮಾಡತಕ್ಕವರಿಗೆ ಶೇ. 3ರಷ್ಟು ತೆರಿಗೆ ಹಾಕಿ. ಒಂದು ಲಕ್ಷದ ಮೇಲೆ ವ್ಯಾಪಾರ ಮಾಡುವವರಿಗೆ ಮತ್ತಷ್ಟು ಜಾಸ್ತಿ ತೆರಿಗೆ—ಈ ರೀತಿ ವಿಧಿಸಬೇಕು. ಯಾವನೋ ಒಬ್ಬ ಮಂತ್ರ ಹೇಳುತ್ತಿದ್ದನಂತೆ. ಆತ ಮದುವೆಗೂ ಮತ್ತು ತಿಥಿಗೂ ಒಂದೇ ತರಹ ಮಂತ್ರ ಹೇಳುತ್ತಿದ್ದನಂತೆ. ಆ ರೀತಿ ಈ ಸರ್ಕಾರ ತೆರಿಗೆ ವಿಧಿಸುವುದು ಆಗಿದೆ. ಬಡವನಿಗೂ ಒಂದೇ, ಶ್ರೀಮಂತನಿಗೂ ಒಂದೇ ಆಗಿದೆ. ಇದು ನ್ಯಾಯವಲ್ಲ. ಎಲ್ಲಾದಕ್ಕೂ ಒಂದೇ ತರಹ ತೆರಿಗೆ ಹಾಕಿಕೊಂಡು ತಮ್ಮ ಅಧಿಕಾರದ ಅವಧಿಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಈಗ ಹಾಕಿರುವ ತೆರಿಗೆ ಎಷ್ಟು? ಅದನ್ನು ನಿಜವಾಗಿ ಸರಿಯಾದ ರೀತಿಯಲ್ಲಿ ವಸೂಲು ಮಾಡುತ್ತಿದ್ದಾರೆಯೇ? ಎಂಬುದನ್ನು ನೋಡಿದರೆ ಬಹಳ ವಿಚಿತ್ರವಾಗಿದೆ. ಈ ರೀತಿ ತೆರಿಗೆಗಳನ್ನು ಹಾಕುವುದಕ್ಕೆ ಸಾಧ್ಯವೇ? ಎಂಬುದನ್ನು ವಿಚಾರ ಮಾಡಬೇಕು. ಈಗ ಹಾಕಿರುವ ತೆರಿಗೆಯಲ್ಲಿ ಶೇ. 25ರಷ್ಟು ಜನರೂ ಸಹ ನ್ಯಾಯವಾಗಿ ಲೆಖ್ಖವನ್ನು ಕೊಡುತ್ತಿಲ್ಲ. ಸಣ್ಣಪುಟ್ಟ ಗುಮಾಸ್ತಗಿರಿಯಲ್ಲಿರತಕ್ಕವರು 20-50 ರೂಪಾಯಿಗಳ ವ್ಯಾಪಾರ ಮಾಡುವವರು ಈ ತೆರಿಗೆ ಕೊಡಬೇಕೆಂದರೆ ಹೇಗೆ? ಅಂತಹವರಿಗೆ ಕಡಿಮೆ ದರದಲ್ಲಿ ರಿಗೆಹಾಕಿ. ಅಂತಹವರನ್ನು ಸಹ ಒಟ್ಟಿಗೆ ತೆರಿಗೆ ಕೊಡಿ ಎಂದರೆ ಹೇಗೆ ಕೊಡುತ್ತಾರೆ? ದೊಡ್ಡ ದೊಡ್ಡ ವ್ಯಾಪಾರಸ್ಥರ ಮೇಲೆ ಇವರು ಹೆಚ್ಚಿಗೆ ತೆರಿಗೆ ಹಾಕುವುದಕ್ಕೆ ಸ್ವಲ್ಪ ಭಯ. ಏಕೆಂದರೆ ಇವರಿಗೆ ಚುನಾವಣೆಯ ಸಮಯದಲ್ಲಿ ಅವರೆಲ್ಲರೂ ಸಹಾಯ ಮಾಡಬೇಕಾಗಿರುತ್ತದೆ. ಆದ್ದರಿಂದ ಸರ್ಕಾರದಲ್ಲಿ ಇವರೇ ಒಂದು ರೀತಿಯಲ್ಲಿ ಸೇರಿಕೊಂಡು ಮೋಸ ಮಾಡುತ್ತಿದ್ದಾರೆಂದರೆ ಅದೇನೂ ತಪ್ಪಲ್ಲ. ಕಾಂಗ್ರೆಸ್ ಪಕ್ಷದವರೇ ಲಂಚದಲ್ಲಿ ನಿಸ್ಸೀಮರಾಗಿದ್ದಾರೆ ಎಂದು ಎಲ್ಲೆಲ್ಲಿಯೂ ಒಂದೇ ಕೂಗು ಆಗಿದೆ. ಒಂದು ಸುಭದ್ರ ಸರ್ಕಾರ ರಚನೆ ಮಾಡುವುದಕ್ಕೆ ಯಾರು ಬರಬೇಕಾಗಿತ್ತು ಎಂಬುದನ್ನು ಅವರೇ ಸರಿಯಾಗಿ ತಿಳಿದುಕೊಳ್ಳದೆ ಯಾವಾಗಲೂ ತಾವೇ ಅಧಿಕಾರದಲ್ಲಿದ್ದುಕೊಂಡು ಸುಮ್ಮನೆ ಚೋಟಾ ಸೈನುಗಳನ್ನು ಹಾಕಿಕೊಂಡು ರಾಜ್ಯಭಾರ ಮಾಡುವುದಕ್ಕೆ ಪ್ರಯತ್ನಪಡುತ್ತಿದ್ದಾರೆಂದು ನನಗೆ ಇದರಿಂದ ಚೆನ್ನಾಗಿ ಗೊತ್ತಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ದೀಪಾವಳಿಯ ಅಳಿಯ ಇದ್ದಹಾಗೆ.

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ.—ಇನ್ನು ಆಹಾರ ಧಾನ್ಯಗಳಮೇಲೆ ಸುಂಕವನ್ನು ಹಾಕಿ ರೈತನಿಗೆ ಕಂದಾಯ ಕೊಡುವುದಕ್ಕೇ ತೊಂದರೆಯಾಗಿರುವಾಗ ಮತ್ತಷ್ಟು ಇವರಿಂದ ಕಿರುಕುಳವನ್ನು ತಂದೊಡ್ಡುತ್ತಿದ್ದಾರೆ. ಇದರಿಂದಲೇ ಅನೇಕರು ಕಂದಾಯ ಕೊಡುವುದನ್ನು ಸಹ ತಪ್ಪಿಸಿಕೊಂಡು ಹೋಗುತ್ತಿದ್ದಾರೆ. ಒಂದು ವೇಳೆ ಯಾರಾದರೂ ತೆರಿಗೆಯನ್ನು ಕೊಡದೆ ಮೋಸ ಮಾಡಿದರೆ ಸರ್ಕಾರದವರು ಅವರ ಮೇಲೆ ಕೇಸು ಹಾಕುತ್ತಾರೆ. ಆದರೆ ದೊಡ್ಡ ದೊಡ್ಡ ಮಿಲ್ ಮಾಲೀಕರು ಕಂಪೆನಿಯವರು ಇಂತಹವರಮೇಲೆ ಕೇಸು ಹಾಕುವುದು ಇವರಿಗೆ ಸ್ವಲ್ಪ ಕಷ್ಟ ಎಂಬುದನ್ನು ಎಲ್ಲರೂ ತಿಳಿಯಬೇಕು. ಏಕೆಂದರೆ ಅವರ ಸಹಾಯ ಇವರ ಚುನಾವಣೆಯ ಕಾಲದಲ್ಲಿ ಅತ್ಯಗತ್ಯವಾಗಿರುತ್ತೆ. ಇವರು ತಮ್ಮ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಈ ದೇಶದ ಆಸ್ತಿಯನ್ನು ಹಂಚಿಕೊಂಡಿದ್ದಾರೆ. ಇವರಿಗೆ ಚುನಾವಣೆಯ ಕಾಲದಲ್ಲಿ ಸಹಾಯ ಮಾಡಿದವರಿಗೆ ಚೇರಮನ್‌ಗಿರಿ, ಮುಂತಾದ ದೊಡ್ಡ ದೊಡ್ಡ ಹುದ್ದೆಗಳನ್ನು ಮೀಸಲಾಗಿಡಬೇಕಾಗುತ್ತದೆ. ಆದರೆ ದೇಶದಲ್ಲಿ ಸಾಮಾನ್ಯ ಜನರಿಗೆ ಅತ್ಯವಶ್ಯವಾಗಿ ಬೇಕಾದಂತಹ ಪದಾರ್ಥಗಳಮೇಲೆ ತೆರಿಗೆ ಹಾಕಿ ಆ ಹಣವನ್ನು ಮತ್ತು ದೇಶದ ಆಸ್ತಿಯನ್ನು ಇವರು ಹಂಚಿಕೊಂಡಿದ್ದಾರೆ. ಶ್ರೀಮಾನ್ ಎ. ಜಿ. ರಾಮಚಂದ್ರ ರಾಯರ ಸಂಪನ್ಮೂಲ ಮತ್ತು ಮಿತವ್ಯಯ ಕಮಿಟಿಯವರು ಸೂಚಿಸಿರುವ ಸಲಹೆಗಳ ಬಗ್ಗೆ ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇವರು ಮುಖ್ಯವಾಗಿ ಮಿತವ್ಯಯದ ವಿಚಾರವನ್ನು ಬಿಟ್ಟು ಬಿಟ್ಟು ಉತ್ಪನ್ನದ ಕಡೆಗೆ ಇವರ ಗಮನ ಹೋಗುತ್ತಿದೆ. ಯಾವುದಾದರೂ ಕೆಟ್ಟದ್ದು ಆದರೆ ನಮ್ಮ ದೇಶವನ್ನು ತೋರಿಸುತ್ತಾರೆ. ಒಳ್ಳೆಯದೇನಾದರೂ ಆದರೆ ಮದ್ರಾಸ್ ಕಡೆ ತೋರಿಸುತ್ತಾರೆ. ಹಿಂದೆ 8 ಜನ ಮಂತ್ರಿಗಳು ಇರಬೇಕು, 12 ಜನ ಮಂತ್ರಿಗಳು ಆಗಿದ್ದು ತಪ್ಪು ಎಂದು ಹೇಳುತ್ತಿದ್ದೆವು. ಈಗ ಒಟ್ಟು 27 ಜನ ಮಂತ್ರಿಗಳು. ಅದರೊಳಗೆ ಇಬ್ಬರು ಪಾರ್ಲಿಮೆಂಟರಿ ಸೆಕ್ರೆಟರಿಗಳು. ಇವರಿಬ್ಬರೂ ಅದೆಲ್ಲಿದ್ದಾರೋ ? ಪರಮೇಶ್ವರನಿಗೇ ಗೊತ್ತು. ಮಂತ್ರಿಗಳನ್ನು ನಾನೇ ಅನೇಕಸಾರಿ ಈ ವಿಷಯವನ್ನು ಕೇಳಿದ್ದೇನೆ. ಮಂತ್ರಿಮಂಡಲದಲ್ಲಿ ಯಾವಾಗಲೂ ಇದ್ದುಕೊಂಡು ಈ ರಾಜಕೀಯ ಅಧಿಕಾರದಲ್ಲಿಯೇ ಅಂಟಿಕೊಂಡಿರಬೇಕು, ಈ ರೀತಿ ಬಡವರಮೇಲೆ ಅನೇಕ ತೆರಿಗೆಗಳನ್ನು ವಿಧಿಸಿ ತೊಂದರೆ ಕೊಡಬೇಕು ಎಂದು ಇರುವುದು ಸರಿಯೇ ? ದೇವರು ಇದ್ದಾನೆಂದು ಳಿದು ಅವನಿಗಾದರೂ ಇವರು ಭಯಪಡಬಾರದೇ ? ಆ ಯೋಚನೆ ಇವರಿಗಿಲ್ಲವೇ ? ಎಂದು ನಾನು ಈ ಸಂದರ್ಭದಲ್ಲಿ ಕೇಳಬೇಕಾಗಿದೆ. ಕೆಲವರು ಇವರಲ್ಲಿ ಹೇಳುತ್ತಿದ್ದರು. ನಾನು ನಿಜವಾಗಿ ನಡೆಯುತ್ತೇನೆ, ಗಾಂಧೀ ಭಕ್ತ ಎಂದು. ಆದರೆ ಶೃಂಗೇರಿ ಸ್ವಾಮಿಗಳು ಒಂದು ಮಾತನ್ನು ಹೇಳುತ್ತಿದ್ದರು. ಎಲ್ಲಿ ಸತ್ಯವಿದೆ ಇತ್ತೀಚೆಗೆಲ್ಲಾ ಸುಳ್ಳು ಹೇಳುವುದು ಒಂದು ಜಾಸ್ತಿಯಾಗುತ್ತಿದೆ ಎಂದು.

Mr. SPEAKER.—No. individual need be brought in.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಇವರಲ್ಲಿ ಒಬ್ಬರ ಮೇಲೊಬ್ಬರು ಜನಗಳಮೇಲಂತೂ ತೆರಿಗೆಗಳನ್ನು ಹಾಕುವುದರಲ್ಲಿ ಮುಂದೆ ಮುಂದೆ ಬರುತ್ತಿದ್ದಾರೆಯೇ ಹೊರತು ಮತ್ತೇನೂ ಇಲ್ಲ. ಈ ರೀತಿಯಾದ ಜನಗಳಿಗೆ ಈ ಸರ್ಕಾರದಮೇಲೆ ಎಷ್ಟರಮಟ್ಟಿಗೆ ಅಭಿಮಾನ ವಿರುತ್ತದೆಂಬುದನ್ನು ಯೋಚನೆ ಮಾಡಬೇಕು.

4-30 P.M.

ಈ ರೀತಿ ಸರಕಾರ ಸುಂಕದಕಟ್ಟೆ ಮ್ಯಾನೇಜರುಗಳಾಗಿರುತ್ತಾರೆ. ಇನ್ನು ಮುಂದಾದರೂ ಸುಂಕದ ಕಟ್ಟೆ ಮ್ಯಾನೇಜರಾಗುವುದನ್ನು ಬಿಟ್ಟು ದೇಶದ ಅಭ್ಯುದಯಕ್ಕೆ ಯಾವ ಯಾವ ದೊಡ್ಡ ಶ್ರೀಮಂತರುಗಳಿದ್ದಾರೋ ಅವರಿಂದ ಸುಂಕ ವಸೂಲು ಮಾಡಿ ಅಂತಹ ಕದೀಂಟೆನೆಂಟುಗಳು ಇರುವುದರಿಂದ ಅವರ ಮೇಲೆ ಈ ಟ್ಯಾಕ್ಸುಗಳನ್ನು ಹಾಕಿ, ಸಾಮಾನ್ಯ ಜನರಿಗೆ ಸುಂಕ ಹಾಕುವುದನ್ನು ಬಿಡಬೇಕೆಂದು ಹೇಳುತ್ತೇನೆ.

Sri B. R. SUNTHANKAR (Belgaum-I).—Mr. Speaker, Sir, a large number of Hon'ble Members have offered their remarks on this important Bill. So, I would try to avoid any repetition.

The Sales Tax has been the main-stay of the State revenues in recent times not only in this State, but also in all the other States of this country. As has been rightly pointed out by my Hon'ble Friend Sri Annarao Ganamukhi the sales tax has been a kamadhenu to the States. Whenever any Governments is in need of funds, it need only approach this kamadhenu and milk her. Perhaps I am afraid the State Government are milking this cow too much so that time may come when this Kamadhenu may refuse to give any more milk. This is a tax which is very elastic and very flexible and covers a wide range of commodities and touches the pockets of all sections of the society. This tax poses a number of problems for the administration and the Government also. This tax requires a proper and strict administration. Then the problem of evasion is there. The worst feature of such a tax is that it is the honest traders who suffer and they suffer for the dishonesty of others, because the tax-evaders get scot-free while the honest trader has to suffer at the hands of the officers. To avoid evasion which is the most important problem for the State, proper and stricter administration is necessary. The A.G.R. Committee has made a number of valuable suggestions and we hope that the Government would follow them and try to check evasion as much as possible. The committee has found out that if the evasion is properly checked with efficiency and strict administration, the revenue from this source can

(SRI B. R. SUNTHANKAR)

be stepped up from Rs. 9 coroes to 12 crores. That means, in the opinion of the committee, at least there has been evasion of this tax to the extent of Rs. 3 crores. If the Government succeeds in recovering these Rs. 3 crores, there will be absolutely no necessity to bring in such amending Bills, because this Bill would according to the expectation of the Government, bring a revenue of Rs. 1,40,00,000. This is the fourth taxation measure that this House has taken up.

Then, I look at this Bill from another aspect. The State has embarked upon a plan of Rs. 250 crores. For the successful implementation of a plan of this magnitude, Government will have to augment its resources. So, tax revenue has got to be augmented for successful implementation of the plan. But the point is that the burden of this taxation should not fall on the common man. But I am afraid, the burden of taxation is falling very heavily on the common man in the State. Particularly, this sales tax will affect even the poorer sections of the community; they will not be free from this tax; in a way, it cannot be avoided. So, the common man will have to sacrifice for planning and development. But the point is that the common man should not suffer too much and too heavily. Looking to this taxation measure, I am afraid the burden will fall on the common man too much. The Third Plan is going to cost very heavily for the common man. The Government will have to raise Rs. 40 crores for the Third Plan; that is the gap in the Plan. That means, there will be increase in per capita taxation of Rs. 20 looking to the population of the State. At present, the taxation is Rs. 15 per capita. At the end of the Third Five-Year Plan the per capita taxation will be Rs. 35. That will be too much taking into consideration the financial position of the people of the State. If you compare this per capita taxation to the per capita income, we will come to know more about it. According to the figures that were given to us in 1961, the per capita income in the State is Rs. 266. At the end of the Third plan *i.e.* in 1966, the per capita income is expected to be Rs. 298. That means, there will be an increase of Rs. 32 in the per capita income. But out of this Rs. 32, Rs. 20 *i.e.* two-third of the rise in income would be eaten away by this taxation. So, that will leave about only one-third, *i.e.*, Rs. 10 to Rs. 12 for every man in the State for raising his standarad of living. That is very meagre looking to all the planning, development and so much of activity. Only Rs. 12 will be left for a common man to raise the standard of living. That is a very sad picture. That is why I said, Sir, this taxation is going to cost very heavily for the common man in the State. That will leave very little scope for the improvement in the standard of living and his ways of life. More income to the people means less income to the people. That will be the result of this taxation. There is another angle also from which this taxation can be seen.

Sri ANNA RAO GANAMUKHI (Afzalpur).—During the first year of the plan, there has been an increase of 3½ per cent only and so during the five year period of the plan, it would not come to 30 per cent.

Sri B. R. SUNTHANKAR.—I am taking the over-all picture. There is another angle to this question. Let us look at the proportion of taxation to the national income. Sir, in the Second Plan, this proportion of taxation to national income rose from 7.5 per cent to Rs. 8.9 per cent. That means the taxation covered 7.5 per cent of the national income at the beginning of the Second Plan and it rose to 8.9 per cent of the total national income. In the Third Plan, the proportion is expected to go up to 11.4 per cent of the notional income. Sir, let us look at the figures of Mysore. By the end of the Second Five-Year Plan, the proportion of taxation to income of the State as a whole was 5.6 per cent; by the end of the Third Plan, this proportion would be stepped up to 11.7 per cent. The national proportion is 11.4 per cent. So, by the end of Third Five-Year Plan, the proportion of this State would be

higher than the national proportion. National proportion will be 11.4 per cent and the proportion for the State will be 11.7 per cent. It will be therefore higher than the national proportion.

Sri ANNA RAO GANAMUKHI.—Have you got figures for the adjoining States?

Sri B. R. SUNTHANKAR.—So, taking into consideration all these aspects of the question, the question that arises before my mind is whether we have been over-ambitious in chalking out our Third Plan for State, and whether the financial position of the people can squarely face the burden of this heavy taxation. I have got my own doubts regarding this. I have no hesitation in saying that if it is found that this heavy taxation is going to affect the common man very heavily and affect the economy of the State as a whole, the Third Plan should be curtailed and shoud be brought to a lower level. If it really will affect the interest of the people, it is better to trim it down to a certain extent and lesson the burden of taxation. Now, coming to the Bill proper, as has been pointed out by a number of Hon'ble Members, the most objectionable part of the Bill is that it taxes a number of essential commodities, the basic requirments of life, such as cereals, foodgrains, chillies, firewood, etc. That will result in increasing the price and that will result in increasing the cost of living of the people also. Particularly, the most objectionable part of this Bill is that it levies taxes on foodgrains. Sir, the Centre is trying its best to bring down the prices of foodgrains and to hold the price line, the Central Government is making streneous efforts. This taxation would come in the way of bringing down prices. Taxing of cereals and foodgrains would naturally result in raising their prices. So, I think, Sir, these essential commodities and basic requirements of life should be exempted. Particularly with regard to firewood, my hon'ble friend Sri Kadam has rightly pointed out, if it is taxed cost of firewood would go up higher and naturally the poorer section would resort to burning cow-dung in villages whenever firewood is scarce. Then so much of valuable manure is wasted and lost. So, the Government should exempt firewood atleast. Similarly chillies also should be exempted. Chillies is a basic requirement of the common man and it should also be exempted. Then about retrospective effect, a number of Hon'ble friends have pointed out that retrospective effect will cause hardship to the people, to the traders particularly. My last point is about the treatment of assessees. The A.G.R. Committee has rightly pointed out that the tax-payer should be treated with respect and consideration. There have been various complaints from the Traders that they are unnecessarily harassed by the officers. There has been too much harassment by officers caused to traders or the assessees. It is very essential as has been pointed out by the A.G.R. Committee that harmonious relations should be established with the assessees and the merchant class as a whole. There should be no harassment of honest traders. They should suffer for the dishonesty of others. I have been receiving complaints from assessees and traders from Belgaum that whenever inspecting officers go to their shops, they search their treasuries and their boxes. I do not know what authority they have got to search their treasuries and cash boxes. It is an encroachment on the individual right. The Inspecting Officers may examine their accounts or may examine their papers and documents. It is unfair and unjust and it is an encroachment on individual liberty to search cash boxes and search treasuries.

An HON'BLE MEMBER.—Suppose he keeps his accounts inside his treasury.

Sri B. R. SUNTHANKAR.—He may call for his accounts books. There are other provisions as to what to do in such cases. Why should he search his cash box? Then, Sir, one more point. In Belgaum at least and in a number of places, the post of officers particularly Deputy Commissioners have been kept vacant for a number of months.

Mr. SPEAKER.—Does the appointment of Deputy Commissioners come under this Act ?

Sri B. R. SUNTHANKAR.—The appointment of Deputy Commissioners of Sales Tax. That causes a great hardship to the people.

At times, for months together there is no authority to whom appeals should be preferred and assessees are put to great hardships. So, I request the Government to see that such higher posts are not kept vacant for a longer time. We expect that this Bill, after it comes from the Select Committee, will emerge in a modified manner and will give relief to the common man.

†ಶ್ರೀ ಕೆ. ದೇವಯ್ಯ (ಮಲ್ಲೇಶ್ವರಂ).— ಮಾನ್ಯ ಅಧ್ಯಕ್ಷರೆ, ನಮ್ಮ ಸ್ನೇಹಿತರನೇಕರು ಈ ಮಾರಾಟ ತೆರಿಗೆಯ ಎರಡನೆ ತಿದ್ದುಪಡಿ ವಿಚಾರವಾಗಿ ಬೇಕಾದಷ್ಟು ವಿಷಯಗಳನ್ನು ತಿಳಿಸಿದ್ದಾರೆ. ಜನರ ಆಗು ಹೋಗುಗಳನ್ನು ವಿವರಿಸಿ ಎಲ್ಲವನ್ನೂ ಗಮನಕ್ಕೆ ತಂದಿದ್ದಾರೆ. ನಮ್ಮ ಜನ ಅದರಲ್ಲೂ ಮೈಸೂರಿನವರು ಬಹಳಮಟ್ಟಿಗೆ ಕಾರ್ಮಿಕರು, ಬಡವರು, ಸರ್ಕಾರಿ ನೌಕರರು, ಉಳಿದವರು ಹಂಗಾಮಿ ಕೆಲಸಗಳಲ್ಲಿ, ರೈತಾಪಿ ಕೆಲಸಗಳಲ್ಲಿ, ಮೂರನೆ ಯೋಜನೆ ಕೆಲಸದಲ್ಲಿ ತೊಡಗಿದ್ದಾರೆ. ಅವರಿಗೆ ಖಾಯವಾಗಿ ಕೆಲಸ ದೊರಕುವುದು ಬಹಳ ಕಷ್ಟ. ಇತ್ತೀಚೆಗೆ ರಾಮನಗರದಲ್ಲಿ ಹಾಗೂ ಇತರ ಅನೇಕ ಕಡೆಗಳಲ್ಲಿ ನೋಡಿದಂತೆ ನೆರೆಹಾವಳಿಯಿಂದ ಎಷ್ಟೋಜನರು ಕಷ್ಟಕ್ಕೆ ಗುರಿಯಾಗಿರುವುದು ಎಲ್ಲರಿಗೂ ಗೊತ್ತಿದೆ. ಇಂಥ ಒಂದು ಪರಿಸ್ಥಿತಿಯಲ್ಲಿ ಕೆಲವು ದಿನಗಳಲ್ಲೇ ಬರುವ ದಸರಾ ಮಹೋತ್ಸವಕ್ಕೆ ನಮ್ಮ ಆರ್ಥಿಕ ಮಂತ್ರಿಗಳು ಉಡುಗರೆಯೋಪಾದಿಯಲ್ಲಿ ಈ ತೆರಿಗೆಯ ಮಸೂದೆಯನ್ನು ತಂದಿರುವುದು ಬಹಳ ವಿಷಾದಕರ. ನಮ್ಮ ಜನರು ಬಹಳ ಬಡತನದಲ್ಲಿ ನರಳುತ್ತಿದ್ದರೂ ಇದು ವರೆಗೆ ಹೇಗೋ ಗೌರವ ಕಾಪಾಡಿಕೊಂಡು ಬಂದಿದ್ದಾರೆ. ತೆರಿಗೆ ಹಾಕುವ ವಿಧಾನವೂ ಕೂಡ ಒಂದು ರೀತಿ ಇರಬೇಕು. ಈಗ ಆಹಾರ ಸಾಮಗ್ರಿಗಳ ಮೇಲೆ ತೆರಿಗೆ ಹಾಕುವುದರಿಂದ ರೂಪಾಯಿಗೆ ಒಂದು ಸೇರು ಅಕ್ಕಿ ಸಿಕ್ಕುವುದೇ ಕಷ್ಟವಿರುವಾಗ ಮುಕ್ಕಾಲು ಸೇರು ಅರ್ಧ ಸೇರು ಸಿಕ್ಕುವುದು ಇನ್ನೂ ಕಷ್ಟವಾಗಬಹದು. ಬಜಾರಿನಲ್ಲಿರುವ ಅಕ್ಕಿ ಕಾಳಸಂತೆಗೆ ಹೋಗಬಹುದು. ಜನತೆ ಹಾಹಾಕಾರ ಪಡಬಹುದು, ದುಃಖಪಡಬಹುದು ಇದು ಖಂಡಿತವಾಗಿ ತೆರಿಗೆ ಹಾಕುವ ವಿಧಾನವಲ್ಲ. ಆಹಾರದ ಅಭಾವ ತಲೆದೋರಿದರೆ ಕಾರ್ಮಿಕರಿಗೂ, ಕೆಲಸಗಾರರಿಗೂ ಅತೃಪ್ತಿಯುಂಟಾಗಿ ಜೀವನ ನಡೆಸಿಕೊಂಡುಹೋಗಲು ಸಾಧ್ಯವಾಗದೆ ಬಹುಶಃ ಮುಷ್ಕರವನ್ನು ಕೂಡ ಹೂಡುವ ಸಂದರ್ಭ ಬರಬಹುದು. ಇದರ ಬದಲು ಈಗ ಒಂದೇ ಒಂದು ದಾರಿಯನ್ನ ಸರ್ಕಾರ ಅನುಸರಿಸಿದರೆ ಈ ಎಲ್ಲ ಸಂಕಟಗಳೂ ದೂರವಾಗಿ ಮೂರನೆಯ ಯೋಜನೆಗೆ ಬೇಕಾದಷ್ಟು ಹಣವನ್ನು ಕೂಡ ಒದಗಿಸಲು ಅವಕಾಶವಾಗುತ್ತದೆ ಎಂದು ಹೇಳಬಯಸುತ್ತೇನೆ. ಎಲ್ಲ ಜನರಿಗೂ ಅಗತ್ಯವಾಗಿ ಬೇಕಾದ ಆಹಾರ ಸಾಮಗ್ರಿಗಳನ್ನು ಅತಿ ಕಡಿಮೆ ಬೆಲೆಯಲ್ಲಿ ಒದಗಿಸುವ ಏರ್ಪಾಡು ಸರ್ಕಾರ ಎಷ್ಟರ ತನಕ ಮಾಡುವುದಿಲ್ಲ, ಅಷ್ಟರ ತನಕ ಎಷ್ಟೇ ಕಂದಾಯ ಹಾಕಿದರೂ ಕೂಡ ಜನರ ಕಷ್ಟ ಕಡಿಮೆಯಾಗುವುದಿಲ್ಲ; ಇನ್ನೂ ಅತಿಯಾಗುತ್ತದೆ. ಉದಾಹರಣೆಗೆ ನಮ್ಮ ಜನತೆ ಅಕ್ಕಿ, ರಾಗಿ, ಜೋಳ, ಮೆಣಸಿನಕಾಯಿ, ಕೊತ್ತಂಬರಿ ಇಂಥ ಸಾಮಗ್ರಿಗಳನ್ನು ಬಹಳವಾಗಿ ಉಪಯೋಗ ಮಾಡುತ್ತಿದ್ದಾರೆ. ಸರ್ಕಾರ ದೊಡ್ಡ ಮನಸ್ಸು ಮಾಡಿ ಒಂದು ರೂಪಾಯಿಗೆ 3 ಸೇರು ಅಕ್ಕಿ, 4 ಸೇರು ರಾಗಿ ದೊರೆಯುವಂತೆ ಕಡಿಮೆ ದರದಲ್ಲಿ ಪ್ರತಿಯೊಬ್ಬ ಪ್ರಜೆಗೂ ಒದಗಿಸಲು ಅವಕಾಶ ಮಾಡಿದರೆ ಅಲೋಯನ್ಸ್ ಮತ್ತು ಸಂಬಳವನ್ನು ಜಾಸ್ತಿಯಾಗಿ ಕೊಡಬೇಕಾಗುವುದಿಲ್ಲ ಖೋತಾಮಾಡಬಹುದು ಇದರಿಂದ ಹಣ ಉಳಿತಾಯವಾಗಿ ಸಾಕಷ್ಟು ಸರ್ಕಾರಕ್ಕೆ ದೊರೆಯುತ್ತದೆ ಎಂದು ಭರವಸೆ ಕೊಡಬಲ್ಲೆ. ಸೆಕ್ರೆಟೇರಿಯಟ್ ನೌಕರರಿಗೆ ಈಗ ಸಂಬಳ ಜಾಸ್ತಿ ಮಾಡಿ 148 ರೂಪಾಯಿಗಳನ್ನು ಕೊಡುತ್ತಿದ್ದೀರಿ. 5-6 ಜನರಿರುವ ಸಂಸಾರಕ್ಕೆ ಕನಿಷ್ಠ ಪಕ್ಷ 150 ರೂಪಾಯಿಗಳು ಆಹಾರ ಸಾಮಗ್ರಿಗಳಿಗಾಗಿ ಬೇಕು. ಅಷ್ಟು ಸಾಮಗ್ರಿಗಳು 75 ರೂಪಾಯಿಗಳಿಗೆ ಸಿಕ್ಕುವ ಹಾಗೆ ಮಾಡಿದರೆ ಸೇಕಡ 50 ರಷ್ಟು ಸಂಬಳ ಕಡಮೆ ಮಾಡಿ ಆ ಹಣವನ್ನು ಪಂಚವಾರ್ಷಿಕ ಯೋಜನೆಗೆ ಉಪಯೋಗ ಮಾಡಿಕೊಳ್ಳಬಹುದು. ಮೊದಲೇ ಈ ಕೆಲಸ ಮಾಡಬೇಕಾಗಿತ್ತು. ಎಷ್ಟೋ ಸಲ ಕಾರ್ಮಿಕರು ಮುಷ್ಕರ ಹೂಡಿದ ಮೇಲೆ ಹೆಚ್ಚು ಸಂಬಳ ಕೊಡುತ್ತೀರಿ. ಇದಕ್ಕೇಕೆ ಅವಕಾಶ ಕೊಡಬೇಕು ? ಫಂಡಮೆಂಟಲ್ ಪ್ರಿನ್ಸಿಪಲ್‌ನಂತೆ ಆಹಾರ ಸಾಮಗ್ರಿಗಳ ಬೆಲೆ ಮಿತಿಗೊಳಿಸಿ ನ್ಯಾಯವಾದ ಬೆಲೆಗೆ ಅಕ್ಕಿ, ರಾಗಿ, ಜೋಳ ಮುಂತಾದುವನ್ನು ಮಾರುವಂತೆ ನಿಯಮಿಸಿ, ಯಾವನಾದರೂ ಹೆಚ್ಚು ಬೆಲೆಗೆ ಮಾರಿದರೆ ಶಿಕ್ಷೆ ಮಾಡಿ ಅವಮಾನ ಮಾಡಿದರೆ ಖಂಡಿತ ಯಾರೂ ಕಾಳ ಸಂತೆಗೆ ಹೋಗುವುದಿಲ್ಲ, ಸರ್ಕಾರಕ್ಕೂ ಮತ್ತು ಜನರಿಗೂ ಅನುಕೂಲವಾಗುತ್ತದೆ. ಈಗ ಮಾರಾಟ ತೆರಿಗೆಯನ್ನು ಆಹಾರ ಸಾಮಗ್ರಿಗಳ ಮೇಲೆ ಹಾಕುತ್ತಿದ್ದಾರೆ. ಇದರಿಂದ ಜನರಲ್ಲಿ ಮತ್ತು ನೌಕರರಲ್ಲಿ ಜೀವನ ನಡೆಸುವುದು ಬಹಳ ಕಷ್ಟವಾಗಿ ಅತೃಪ್ತಿಯುಂಟಾಗಿ ಮುಷ್ಕರ ಹೂಡುವ ಮನೋಭಾವ ಬೆಳೆಯಲು ಅವಕಾಶವಾಗುತ್ತದೆ. ಎಚ್. ಎಂ. ಟಿ., ಐ. ಟಿ. ಐ., ಮುಂತಾದ ಕಾರ್ಖಾನೆಗಳಲ್ಲಿ ಬೇಕಾದಷ್ಟು ನೌಕರರೇ ಇದ್ದಾರೆ ಅವರು ಮುಷ್ಕರ ಹೂಡಲು ಏಕೆ ಅವಕಾಶ ಕೊಡಬೇಕು ? ನಮ್ಮ ದೇಶದಲ್ಲಿ ಈಗ ಜನಸಂಖ್ಯೆ ಜಾಸ್ತಿಯಾಗಿದೆ. ಅವರಿಂದ ಎಷ್ಟು ಬೇಡಿಕೆಯಿದೆ, ಎಲ್ಲಿಂದ ಒದಗಿಸಬೇಕು ಎಂಬುದನ್ನು ಯೋಚನೆ ಮಾಡಬೇಕಾಗಿತ್ತು. ಆಹಾರ ಸಾಮಗ್ರಿಗಳ ಮೇಲೆ ಈ ತೆರಿಗೆಯನ್ನು ಹಾಕಬಾರದು. ಇದರಂತೆ ಅನೇಕ ತೆರಿಗೆಗಳನ್ನು ಹಾಕಿದ್ದಾರೆ. ಇದು ಸಾಧುವಾದದ್ದಲ್ಲ. ಇದರಿಂದ ಬಹಳ ಕಷ್ಟ ಪರಿಸ್ಥಿತಿಯುಂಟಾಗುತ್ತದೆ. ಜನರಲ್ಲಿ ಹಾಹಾಕಾರವುಂಟಾಗುತ್ತದೆ, ಜೀವನ ನಡೆಸುವುದು ಕಷ್ಟವಾಗುತ್ತದೆ, ಒಂದು ಸಣ್ಣ ಸಂಸಾರಕ್ಕೆ ಒಂದು ತಿಂಗಳಿಗೆ 30 ರೂಪಾಯಿಗಳ ಸೌದೆ ಬೇಕು. ಅದರ ಮೇಲೂ ತೆರಿಗೆಯಿದೆ. ಮನೆಯ ಮೇಲೆ ತೆರಿಗೆ ಹಾಕುವುದರಿಂದ ಒಂದು ಚದರಕ್ಕೆ ಒಂದು ರೂಪಾಯಿ ಜಾಸ್ತಿ ಬಾಡಿಗೆ ಕೊಡಬೇಕಾಗುತ್ತದೆ. ನಾಲ್ಕು ಚದರವಿದ್ದರೆ 4 ರೂಪಾಯಿಗಳನ್ನು ಬಡವ ಹೇಗೆ ಕೊಡಲು ಸಾಧ್ಯ ?

ಆದುದರಿಂದ ಆಹಾರ ಸಾಮಗ್ರಿಗಳಮೇಲೆ ತೆರಿಗೆ ಹಾಕಲು ತಂದಿರುವ ಈ ತಿದ್ದುಪಡಿಯನ್ನು ಸಂಪೂರ್ಣವಾಗಿ ವಿರೋಧಿಸಿ, ಇದನ್ನು ಮಸೂದೆಯಿಂದ ತೆಗೆದು ಹಾಕಬೇಕೆಂದು ಮಂತ್ರಿಗಳನ್ನು ಬೇಡುತ್ತೇನೆ.

5.00 P.M.

†ಶ್ರೀ ಎಸ್.ಎಂ. ಗುರ್ರಡ್ಡಿ (ಮುದ್ದೇಬಿಹಾಳ್).—ಮಾನ್ಯ ಸಭಾಪತಿಗಳೆ, ಈಗ ನಮ್ಮ ಮುಂದಿರುವ ಮಾರಾಟ ತೆರಿಗೆಯ ತಿದ್ದುಪಡಿ ಮಸೂದೆಯನ್ನನು ಮೋದಿಸುತ್ತಾ ಕೆಲವು ವಿಚಾರಗಳನ್ನು ತಿಳಿಯಪಡಿಸ ಲಚ್ಛಿಸುತ್ತೇನೆ. ಇದರ ಬಗ್ಗೆ ಸಾಕಷ್ಟು ಜನ ತಮ್ಮ ಅಭಿಪ್ರಾಯಗಳನ್ನು ಸಭೆಯ ಮುಂದಿಟ್ಟಿದ್ದಾರೆ. ಯಾರಿಗೆ ತೆರಿಗೆ ಕೊಡಲು ಶಕ್ತಿ ಇದೆಯೋ ಅವರಿಗೆ ತೆರಿಗೆ ವಿಧಿಸಬೇಕೆಂಬುದು universal truth, ಇದನ್ನು ಯಾರೂ ವಿರೋಧಿಸುವುದಿಲ್ಲ. ಅಗರಲ್ಲಿಯೂ ಇಂಥ ಸಮಯದಲ್ಲಿ, ಎಂದರೆ, ನಮ್ಮ ದೇಶವನ್ನು ಪುನರ್ನಿರ್ಮಾಣ ಮಾಡುವುದಕ್ಕೆ ನಾವು ಹೊರಟಿರುವ ಸಮಯದಲ್ಲಿ, ನಮಗೆ ತೆರಿಗೆ ಬೇಡ, ನಮಗೆ ಅದು ಬೇಕು, ಇದು ಬೇಕು ಎಂದು ಕೂಗುವುದು ಒಳ್ಳೆಯದಲ್ಲ. ನಮ್ಮ ಮುಂದಿರುವ ಮಸೂದೆ ನ್ಯೂನತೆಯಿಂದ ಕೂಡಿದೆಯೆಂದು ಕಾಣುವುದಿಲ್ಲ. ಧಾನ್ಯಗಳ ಮೇಲೆ ಈ ತೆರಿಗೆ ತೆಗೆದುಕೊಳ್ಳುವುದು ಸರಿಯಲ್ಲವೆಂದು ಹೇಳಿದರು. ಈ ತೆರಿಗೆಯನ್ನು ಹಾಕಿದರೆ ಒಂದು ಕುಟುಂಬಕ್ಕೆ 50 ಅಥವಾ 60 ನಯೆಪೈಸೆ ಬೀಳಬಹುದು. ಇದನ್ನು ಕೊಡುವುದಕ್ಕೆ ತಯಾರಾಗಿಲ್ಲವೆಂದು ಹೇಳಿದರೆ ಅವರು ಯೋಜನೆಗಳನ್ನು ಕಾರ್ಯಗತಮಾಡಲು ಎಷ್ಟು ಪ್ರಯತ್ನಮಾಡತ್ತಾರೆಂಬುದು ಗೊತ್ತಾಗುತ್ತದೆ. ಶ್ರೀಮಾನ್ ಮುಕ್ಕಣ್ಣಪ್ಪನವರು ತೆರಿಗೆಯ ವಿಚಾರ ಮಾತನಾಡುವ ಸಂದರ್ಭದಲ್ಲಿ ಸರ್ವಜ್ಞನ ವಚನವನ್ನು ಹೇಳಿದರು. ಆದರೆ ಯೋಜನೆಗಳು ನಮಗೆಬೇಕು, ಅದಕ್ಕೆ ಬೇಕಾದ ಹಣವನ್ನೊದಗಿಸಲು ತೆರಿಗೆ ಹಾಕಿದರೆ ಅದು ಮಾತ್ರ ಬೇಡ ಎಂದು ಹೇಳಿದರೆ ಅವರು ಹೇಳಿದ ಸರ್ವಜ್ಞನ ವಚನ ಅವರಿಗೇ ಅನ್ವಯಿಸುತ್ತದೆ. ಕೆಲವು ಧಾನ್ಯಗಳ ಮೇಲೆ ಮತ್ತು ಇತರ ಕೆಲವು ಪದಾರ್ಥಗಳ ಮೇಲೆ ತೆರಿಗೆ ವಿಧಿಸಿದರೆ ಅದು ಸಾಮಾನ್ಯ ಜನರ ಮೇಲೆ ಬೀಳುತ್ತದೆ ಎನ್ನುವುದು ನಿಜ. ಆದರೆ ಯೋಜನೆಗಳೂ ಕೂಡ ಸಾಮಾನ್ಯ ಜನರಿಗೇ ಇರುವುದು ಎಂದು ನಾನು ಹೇಳುತ್ತೇನೆ. ಜನಸಾಮಾನ್ಯರನ್ನು ಉದ್ಧಾರಮಾಡುವುದಕ್ಕಾಗಿಯೇ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಶ್ರೀಮಾನ್ ಮುಕ್ಕಣ್ಣಪ್ಪನವರು ಮಹಾಭಾರತವನ್ನು ತಿರುವಿಹಾಕಿದ್ದಾರೆ, ಅರ್ಥಶಾಸ್ತ್ರವನ್ನು ಅಭ್ಯಾಸ ಮಾಡಿದ್ದಾರೆ. ರಾಮಾಯಣದ ಕಾಲದಲ್ಲಿ, ಸೇತುವೆಯನ್ನು ಕಟ್ಟುವುದಕ್ಕೆ ಇಣಚಿಗಳು ಕೂಡ ರಾಮನಿಗೆ ಸಹಾಯ ಮಾಡಿದವು. ಹಾಗೆಯೇ ನಮ್ಮ ರಾಜ್ಯವನ್ನು ಮಾದರಿಯಾಗಿ ಕಟ್ಟಲು ಪ್ರತಿಯೊಬ್ಬರೂ ಸಹಾಯ ಮಾಡಬೇಕಾಗುತ್ತದೆ. ಆದುದರಿಂದ ಈ ಮಾರಾಟ ತೆರಿಗೆಕೊಡುವ ಮೂಲಕ ಅಥವಾ ಬೇರೆ ಇತರ ಮಾರ್ಗಗಳ ಮೂಲಕ ಎಲ್ಲ ಜನರೂ ತಮ್ಮ ಸೇವೆಯನ್ನು ಸಲ್ಲಿಸಲು ಸಿದ್ಧರಾಗಿರಬೇಕು. ರೈತ ದೇಶದ ಬೆನ್ನುಮೂಳೆ, ಬೆನ್ನುಮೂಳೆಯನ್ನು ಮುರಿದು ಹಾಕುತ್ತೀರಿ ಎಂದು ಒಬ್ಬರು ಸ್ನೇಹಿತರು ಹೇಳಿದರು. ಅದು ನನಗೆ ಅರ್ಥವಾಗುವುದಿಲ್ಲ. ಮಾರಾಟ ತೆರಿಗೆ ವಿಚಾರ ಬಂದ ಕೂಡಲೆ ಏನೋ ತಲೆಯಲ್ಲಿಟ್ಟುಕೊಂಡು ಮಾತನಾಡುತ್ತಾರೆ. ನಮ್ಮ ವಿರೋಧ ಪಕ್ಷದ ಸದಸ್ಯರು ಈ ಯೋಜನೆಗಳಲ್ಲಿ ತಾವೂ ಹೊಣೆಗಾರರೆಂದು ತಿಳಿದುಕೊಳ್ಳಬೇಕು. ನಾವು ದೇಶವನ್ನು ಕಟ್ಟಬೇಕೆಂದು ಹೊರಟ ಮೇಲೆ ಅನೇಕ ತೆರಿಗೆಗಳನ್ನು ಹಾಕಲೇಬೇಕು. ಇಲ್ಲದಿದ್ದರೆ ಹಣ ಎಲ್ಲಿಂದ ಬರಬೇಕು ? ಹಣವಿಲ್ಲದೆ ಪುನರ್ನಿರ್ಮಾಣ ಮಾಡುವುದಕ್ಕೆ ಸಾಧ್ಯವಿಲ್ಲ. ಹೀಗಿದ್ದರೂ ಮೂರು ನಾಲ್ಕು ಯೋಗ್ಯ ತಿದ್ದುಪಡಿಗಳು ಬಂದಿದ್ದುವನ್ನು ಅವರು ವಿರೋಧಮಾಡುತ್ತಿದ್ದಾರೆ. ಯಾವ ಚರ್ಚೆಯೂ ಇಲ್ಲದೆ ಈ ತಿದ್ದುಪಡಿ ಮಸೂದೆಗಳು ಮಂಜೂರಾಗಬಹುದೆಂದು ನಾವು ತಿಳಿದುಕೊಂಡಿದ್ದೆವು. ಆದರೂ ಕೂಡ ಏನೋ ವಿರೋಧ ಮಾಡುವ ಒಂದು ಪರಂಪರೆ ತಮಗೆ ಬಂದಿದೆಯೆಂದು ವಿರೋಧಮಾಡುತ್ತಾರೆ. ಶ್ರೀಮಂತರು ಉಪಯೋಗ ಮಾಡುವ ವಸ್ತುಗಳ ಮೇಲೆ ಕರಹಾಕಬೇಕೆಂದು ಹೇಳುವುದು ನ್ಯಾಯ. ಕೆಲವರು ಸದಸ್ಯರು ಮೋಟಾರುಗಳು, ಡೀಸೆಲ್ ಮತ್ತು ಪೆಟ್ರೋಲ್ ಮೇಲೆ ಹೆಚ್ಚು ತೆರಿಗೆ ಹಾಕಬೇಕೆಂದು ಹೇಳಿದರು, ಅದನ್ನು ವಿಚಾರಮಾಡಬೇಕಾಗಿದೆ. ಇನ್ನೂ ಯಾವ ಯಾವುದರ ಮೇಲೆ ತೆರಿಗೆ ಹಾಕುವುದು ಯೋಗ್ಯ ಅವುಗಳ ಮೇಲೆ ಹಾಲೇಕಬೇಕು. ಆಹಾರ ಧಾನ್ಯಗಳ ಮೇಲೆ single point ತೆರಿಗೆ ಹಾಕುವುದಕ್ಕೆ ಯಾವ ಅಭ್ಯಂತರವೂ ಇಲ್ಲ. ಆದರೆ ಮೆಣಸಿನಕಾಯಿಯ ಮೇಲೆ ಹಾಕಬಾರದು. ಸೌದೆಯ ಮೇಲೆ ತೆರಿಗೆ ಹಾಕುವುದರಿಂದ ಸಗಣಿಯನ್ನು ಸೌದೆಯ ಬದಲು ಉಪಯೋಗಿಸುತ್ತಾರೆಂದು ಹೇಳಿದರು. ಹಳ್ಳಿಗಾಡಿನಲ್ಲಿ ಕಟ್ಟಿಗೆಯನ್ನು ಕೊಳ್ಳುತ್ತಾರೆಂದು ಅವರು ತಿಳಿದುಕೊಂಡಿದ್ದಾರೆ. ಅದು ಸರಿಯಲ್ಲ, ಅಲ್ಲಿ ಕಟ್ಟಿಗೆಯನ್ನು ಕೊಳ್ಳುವುದಿಲ್ಲ. ಅವರು ಬೆಳೆಸಿದ ಮರಗಳನ್ನು ಕಡಿದು ಉಪಯೋಗ ಮಾಡುತ್ತಾರೆ. ಆದ ಕಾರಣ ಆ ಜನರು ತೆರಿಗೆ ಕೊಡಬೇಕಾಗಿಲ್ಲ. ಹೀಗಿರುವಾಗ ಅವರ ವಾದ ಸರಿಯಲ್ಲ. ತೆರಿಗೆ ಕೊಡದೆ ತಪ್ಪಿಸಿಕೊಳ್ಳುವ ಜನರಿಗೆ ಅನುಕೂಲ, ಪ್ರಾಮಾಣಿಕ ಜನರಿಗೆ ತೊಂದರೆಯಾಗುತ್ತದೆಂದು ಹೇಳಿದರು. ಇದರಿಂದ ತೆರಿಗೆ ಹಾಕಬಾರದೆಂದು ಹೇಳುವ ವಾದ ಎಷ್ಟು ಮಟ್ಟಿಗೆ ಸರಿಯೆಂದು ಯೋಚಿಸಬೇಕು.

Sri C. J. MUCKANNAPPA.—Sir, he is misquoting my friend Sri Sunthankar. He did not say...........

Mr. SPEAKER.—I am not allowing any disturbance. The Hon'ble Member may kindly resume his seat.

Sri C. J. MUCKANNAPPA.—Sir...

Mr. SPEAKER.—I am not allowing it, he may kindly resume his seat.

Sri C. J. MUCKANNAPPA.—But can he say anything, Sir ?

Mr. SPEAKER.—I am not allowing any disturbance. I request the member to resume his seat, when I am on my legs. I have told the member not to disturb others. I have told him thrice. If he does it again, I think I will have to take action.

Sri C. J. MUCKANNAPPA.—Sir.....

Mr. SPEAKER.—I am not permitting.

Sri C. J. MUCKANNAPPA.—I am submitting to the Chair. Can a Member misquote another member ?

Mr. SPEAKER.—I am not permitting it. Instead of resuming he is interjecting. He should not do that again.

Sri C. J. MUCKANNAPPA.—Sir, please treat me with all courtesy. I want the protection of the Chair.

Mr. SPEAKER.—I can give the member such protection as he requires and that is only when he behaves properly. If he does things wrongly, I do not think, that I should give him that protection.

Sri C. J. MUCKANNAPPA.—I am again seeking your protection, because it is the privilege of a member of this House when another member's statement is misquoted, is it not my duty to bring it to the chair'snotice ?

Mr. SPEAKER.—It is not the privilege to disturb other members. Under what provision of law does the member claim that privilege ?

Sri C. J. MUCKANNAPPA.—After the Hon'ble Speaker resumes.........

Mr. SPEAKER.—Even after I resume, I do not want the member to disturb.

Sri C. J. MUCKANNAPPA.—I am not disturbing. I only want protection at the hands of the Chair...........

Mr. SPEAKER.—The only protection that I can give the member is to request him to resume his seat. The member who is addressing should not be disturbed.

Sri C. J. MUCKANNAPPA.—I am not disturbing him. I am not willing to disturb. I am seeking the protection of the chair. I am just bringing to notice that he is misquoting...........

Mr. SPEAKER.—I direct the member to resume his seat and not get up again. When he addresses me, is it not disturbance to the member ? Can't he understand that ?

Sri C. J. MUCKA NAPP.—I will explain my position.

Mr. SPEAKER.—Not now.

Sri C. J. MUCKANNAPPA.—A case has arisen just now, Sir. When something is going on in the House which is not correct, and which is not a fact. I think it is my duty to take it up to the chair with a request to decide what is right and what is wrong. That is all what I wanted to bring before the chair and nothing other than that.

Mr. SPEAKER.—It is not the privilege of every member to hear from the Speaker what he wants.

Sri C. J. MUCKANNAPPA.—It is not what I want.

Mr. SPEAKER.—What does the member call it, a duty or a privilege ?

Sri C. J. MUCKANNAPPA.—It is the duty of every member to bring it to the notice of the Chair when a member is misquoting another member.

Mr. SPEAKER.—Will he kindly site any rule or authority which says that it is his duty to interrupt when another member is speaking ? He is obstructing the member who is speaking. If he does that I will have to control him. He should not disturb. There is no question of his getting up any more now.

Sri C. J. MUCKANNAPPA.—If that is how the chair treats us it is very difficult for us to function here.

Mr. SPEAKER.—If the hon. member gets up again I will have to ask him to go out.

ಶ್ರೀ ಸಿ. ಜೆ. ಮುಂಕ್ಕಣ್ಣಪ್ಪ.—ಈ ರೀತಿಯಾದರೆ It is rather very difficult for any member to function here.

Mr. SPEAKER.—This is not the first time that the Hon'ble Member Sri Muckannappa is disturbing the House.

Sri C. J. MUCKANNAPPA.—Is it not my privilege and duty to bring it to the notice of the Hon'ble Speaker when a member is misquoting another member ?

Mr. SPEAKER.—It is not his privilege.

